www.divinegen.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 8 ಸಂಚಿಕೆ - 5 ಮೇ 2012
Volume : VIII Issue : V May 2012

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Devine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ದೇವರಲ್ಲಿ ಆನಂದಿಸುವುದು
3. ಪ್ರಶ್ನೋತ್ತರಗಳ ಸ್ವರ
4. ಆರೋಗ್ಯ ವರ್ಧನೆಗೆ ಜ್ಯೂಸ್ ಥೆರಪಿ
5. ಕರ್ತವ್ಯವನ್ನು ಅರಿತುಕೊಳ್ಳಿರಿ
6. ತಿಳುವಳಿಕೆಯ ಸ್ವರ
7. ಪ್ರೊಫೆಸರ್ ವಿಲಿಯಂ ಕೇರಿ
8. ಪ್ರಾರ್ಥನಾ ಮನವಿಗಳು
9. ಸ್ಥಳೀಯ ಮತ್ತು ವಿದೇಶ ಸುದ್ಧಿ
10. ಬೈಬಲ್ ಕ್ವಿಜ್ ಪ್ರಶ್ನೆಗಳ ಉತ್ತರಗಳು
11. ಭಕ್ತರ ಹೇಳಿಕೆಗಳು
12. The word shall set you free
13. ರೂತಳ ಪುಸ್ತಕ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧವಾದ ನಾಮದಲ್ಲಿ ಕ್ರಿಸ್ತನಲ್ಲಿ ನನ್ನ ಎಲ್ಲಾ ಸಹೋದರ ಸಹೋದರಿಯರಿಗೂ ನನ್ನ ವಂದನೆಗಳು.

ಸೂಚನೆಗಳ ಮೂಲಕ, ಗುರುತುಗಳ ಮೂಲಕ ಯೇಸುಕ್ರಿಸ್ತನ ಬರೋಣವು ಶೀಘ್ರದಲ್ಲಿ ಇದೆ ಎಂಬುದಾಗಿ ತಿಳಿದುಕೊಳ್ಳುತ್ತೇವೆ. ಅದೇ ರೀತಿಯಲ್ಲಿ ಕರ್ತನಾದ ಯೇಸುಕ್ರಿಸ್ತನನ್ನು ಎದುರುಗೊಳ್ಳುವುದಕೋಸ್ಕರ ಕರ್ತನ ಸಭೆ ಕೂಡಾ ಸಿದ್ಧವಾಗಬೇಕಾಗಿದೆ. ಲೋಕದಲ್ಲಿ ಇನ್ನು ಎಷ್ಟೋ ಜನರು ರಕ್ಷಣೆ ಹೊಂದಬೇಕಾಗಿದೆ. ಕರ್ತನಾದ ಯೇಸುಕ್ರಿಸ್ತನನ್ನು ತಿಳಿದುಕೊಳ್ಳಬೇಕಾಗಿದೆ. ಅದಕ್ಕಾಗಿ ಅವರ ರಕ್ಷಣೆಗಾಗಿ ಈ ಹೊತ್ತು ರಕ್ಷಣೆ ಹೊಂದಿದ ನಾವುಗಳು ತ್ಯಾಗಪೂರ್ವಕವಾಗಿ ದುಡಿಯಬೇಕಾಗಿದೆ. ನಮ್ಮ ಪ್ರಾರ್ಥನೆ, ನಮ್ಮ ಹಣ, ನಮ್ಮ ಸಮಯ, ನಮ್ಮ ಸೇವೆ, ನಮ್ಮ ದುಡಿತ ಇವೆಲ್ಲವೂ ತ್ಯಾಗ ಪೂರ್ವಕವಾಗಿ ಬರಬೇಕಾಗಿದೆ. ಮಾರ್ಚ್ ತಿಂಗಳಲ್ಲಿ ಸೌದಿ ದೇಶವನ್ನು ಪ್ರಥಮ ಬಾರಿಗೆ ಕಾಣುವಂತೆಯೂ, ಆ ದೇಶದಲ್ಲಿ ಕರ್ತನ ಸೇವೆಯನ್ನು ಮಾಡಲಿಕ್ಕೆ ಆಗುವಂತೆಯೂ ಕರ್ತನು ಸಹಾಯಮಾಡಿದನು. ಅಲ್ಲಿರುವಂತಹ ಜನರು ದೇವರಿಗಾಗಿ, ದೇವರ ವಾಕ್ಯಕ್ಕಾಗಿ ಪಡುವ ದಾಹ, ಹಂಬಲ, ಬಯಕೆ ಎಲ್ಲಾ ನೋಡಿ ಸಂತೋಷವಾಯಿತು. ಅಲ್ಲಿ ಬೇರೆ ಜನಾಂಗದ ಜಾತಿ ಜನರು ಪ್ರಾರ್ಥಿಸುವುದು, ಆರಾಧಿಸುವುದು ಕಾನೂನಿಗೆ ವಿರುದ್ಧವಾಗಿದೆ. ಒಂದು ವೇಳೆ ಪೋಲಿಸರಿಗೆ ಸಿಕ್ಕಿದರೆ ಜೈಲಿಗೆ ಹಾಕುತ್ತಾರೆ, ಕೆಲಸ ಕಳೆದುಕೊಂಡು ಭಾರತ ದೇಶಕ್ಕೆ ಹಿಂತಿರುಗುತ್ತಾರೆ. ಆದರೂ ಅಲ್ಲಿಯ ಕ್ರೈಸ್ತ ವಿಶ್ವಾಸಿಗಳು ಕರ್ತನ ಸೇವೆಯನ್ನು, ಆರಾಧನೆಯನ್ನು ಒಂದು ಸವಾಲಾಗಿ ಸ್ವೀಕರಿಸಿಕೊಂಡು ನಡೆಸುತ್ತಿದ್ದಾರೆ. ಅವರು ಕರ್ತನಿಗಾಗಿ ಸೆರೆಮನೆಗೆ ಹೋಗುವುದಕ್ಕೂ, ಶಿಕ್ಷೆ ಹೊಂದುವುದಕ್ಕೂ ಎಲ್ಲದಕ್ಕೂ ಸಿದ್ಧ.

ಯೇಸು ಕ್ರಿಸ್ತನು ಒಂದು ವಾಕ್ಯವನ್ನು ಹೇಳಿದನು, "ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ ಹಿಂಸೆಪಡಿಸಿ ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು. ಸಂತೋಷಪಡಿರಿ, ಉಲ್ಲಾಸಪಡಿರಿ; ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವದು; ನಿಮಗಿಂತ ಮುಂಚೆ ಇದ್ದ ಪ್ರವಾದಿಗಳನ್ನೂ ಹೀಗೆಯೇ ಹಿಂಸೆಪಡಿಸಿದರಲ್ಲಾ" (ಮತ್ತಾ. 5:11–12).

"ಆಗ ನಿಮ್ಮನ್ನು ಉಪದ್ರವಕ್ಕೆ ಒಪ್ಪಿಸಿ ಕೊಲ್ಲುವರು; ನನ್ನ ಹೆಸರಿನ ನಿಮಿತ್ತ ನಿಮ್ಮನ್ನು ಎಲ್ಲಾ ಜನಾಂಗಗಳವರು ಹಗೆಮಾಡುವರು" (ಮತ್ತಾ. 24:9).

ಅಲ್ಲಿ ಕ್ರೈಸ್ತ ವಿಶ್ವಾಸಿಗಳು ಕರ್ತನನ್ನು ಆರಾಧಿಸಬೇಕಾದರೆ ಯಾರಿಗೂ ಗೊತ್ತಾಗದ ರೀತಿ ಆರಾಧಿಸಬೇಕು. ಅವರು ಹೇಳುವ ಮಾತು ನನ್ನನ್ನು ತುಂಬಾ ಪ್ರೋತ್ಸಾಹಪಡಿಸಿತ್ತು. ಉಳಿದ ದೇಶದಲ್ಲಿ ಇರುವ ಹಾಗೆ ಈ ದೇಶದಲ್ಲಿ ಆರಾಧನೆಗಾಗಿ ಸ್ವತಂತ್ರಬೇಕಾಗಿಲ್ಲ, ಸ್ವತಂತ್ರ ಇರುವ ದೇಶದಲ್ಲಿ ಆರಾಧನೆ, ದೇವರ ವಾಕ್ಯದ ಮಹತ್ವ ಗೊತ್ತಾಗಲ್ಲ. ಒಂದು ಶುಕ್ರವಾರ ಆರಾಧನೆ ಮಾಡುವುದಾದರೆ ಇನ್ನೊಂದು ಶುಕ್ರವಾರವನ್ನು ಆಸೆಯಿಂದ ಎದುರುನೋಡುತ್ತಿರುತ್ತಾರೆ. ಸೌದಿಯಲ್ಲಿ ಒಬ್ಬ ವ್ಯಕ್ತಿ ರಕ್ಷಣೆ ಹೊಂದಿದರೆ ದೇವರ ಸೇವೆ ಮಾಡುತ್ತಾನೆ. ಅದಕ್ಕಾಗಿ ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ. ನಾವು ಸಿದ್ಧವಾಗಬೇಕು ಇತರರನ್ನು ಸಿದ್ಧಪಡಿಸಬೇಕು ಆಗ ಈ ಲೋಕ ರಕ್ಷಣೆ ಹೊಂದುವುದು.

"ಅಂತು ಅನೇಕಾನೇಕ ಜನಾಂಗಗಳನ್ನು ನಿನ್ನೊಂದಿಗೆ ಬರಮಾಡುವೆನು. ಸಿದ್ಧವಾಗಿರು. ನಿನ್ನಲ್ಲಿ ಕೂಡಿಬಂದಿರುವ ಎಲ್ಲಾ ತಂಡಗಳೊಡನೆ ನಿನ್ನನ್ನು ಸಿದ್ಧಮಾಡಿಕೋ" (ಯೆಹೆ. 38:7).

ಕರ್ತನು ನಿಮ್ಮನ್ನು ಆಶೀರ್ವದಿಸಿ ನಡೆಸಲಿ, ಆಮೆನ್.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಈಗ ಪ್ರಕಟಣೆ ಪುಸ್ತಕದ 5ನೇ ಧನ್ಯರ ಪಟ್ಟಿಯಾದ ಪ್ರಕ. 20:6ರಲ್ಲಿ ನಾವು ಧ್ಯಾನ ಮಾಡುತ್ತಾ ಇದ್ದೇವೆ, ಪ್ರಥಮ ಪುನರುತ್ಥಾನದಲ್ಲಿ ಸೇರಿರುವವನು ಧನ್ಯನು ಎಂಬುದಾಗಿ.

**ಈಗ ವಿವಿಧ ಪುನರುತ್ಥಾನಗಳ ವಿಷಯವನ್ನು ಧ್ಯಾನಿಸೋಣ:–**

ಪುನರುತ್ಥಾನದ ವಿವಿಧ ಪದ ಹಾಗೂ ಅರ್ಥಗಳು:– Resurection ಎಂಬ ಆಂಗ್ಲ ಪದಕ್ಕೆ ಕನ್ನಡದಲ್ಲಿ ಪುನರುಜ್ಜೀವನ ಸತ್ತು ತಿರುಗಿ ಏಳುವಿಕೆ ಎಂಬಿತ್ಯಾದಿ ಅರ್ಥಗಳಿವೆ. ಮೂಲ ಭಾಷೆಯಾದ ಗ್ರೀಕ್‌ನಲ್ಲಿ ಪುನರುತ್ಥಾನ ಎಂಬುದಕ್ಕೆ ಎರಡು ಪದಗಳನ್ನು ಉಪಯೋಗಿಸಲಾಗಿದೆ.

Anastasis (ಅನಾಸ್ಟಸಿಸ್) ಹಾಗೂ Zoopoieo (ಝೂಪೊಯ್‌ಯೋ)

1) **ಅನಾಸ್ಟಸಿಸ್:** ಬಿದ್ದ ನಂತರ ಎದ್ದು ನಿಲ್ಲು ಅಥವಾ ಜೀವಹೊಂದಿ ಕಾಲೂರಿ ನಿಲ್ಲು ಎಂದರ್ಥ. ಈ ಪದವು ನೀತಿವಂತರ ಹಾಗೂ ಅನೀತಿವಂತರ ವಿವಿಧ ಸಮಯಗಳಲ್ಲಿ ನಡೆಯುವ ಶಾರೀರಿಕ ಪುನರುತ್ಥಾನವನ್ನು ಸೂಚಿಸುತ್ತದೆ. ಮಾನವನ ಮರಣ ನಂತರ ಪುನರುತ್ಥಾನ ಹಾಗೂ ಶರೀರದ ರೂಪಾಂತರ ವೆಂಬುವುದು ಸತ್ಯವೇದದ ಬಹು ಅಮೂಲ್ಯ ಉಪದೇಶಗಳಲ್ಲಿ ಒಂದಾಗಿದೆ. ಕ್ರೈಸ್ತ ವಿಶ್ವಾಸಿಗಳ ನಂಬಿಕೆಯ ಅಡಿಪಾಯವು ಸತ್ತವರ ಪುನರುತ್ಥಾನವೆಂಬ ಉಪದೇಶದ ಮೇಲೆ ನಿಂತಿದೆ. ಹಾಗೆಯೇ ಈ ನಂಬಿಕೆಯ ಮೂಲೆಗಲ್ಲು ಕ್ರಿಸ್ತನ ಪುನರುತ್ಥಾನವಾಗಿದೆ (1 ಕೊರಿ. 15:1–5, 15:14, 20–23). ಕ್ರಿಸ್ತನು ಎದ್ದು ಬರಲಿಲ್ಲವಾದರೆ ನಮ್ಮ ಪ್ರಸಂಗವು ಹುರುಳಿಲ್ಲದ್ದು ಮತ್ತು ನಿಮ್ಮ ನಂಬಿಕೆಯು ಹುರುಳಿಲ್ಲದ್ದು. ಕರ್ತನಾದ ಯೇಸುಕ್ರಿಸ್ತನ ಪುನರುತ್ಥಾನವು ಸತ್ತವರೊಳಗಿನ ಪ್ರಥಮ ಫಲವಾಗಿದೆ.

2) **ಝೂಪೊಯೊ :** (Zoopoieo) ತಿರುಗಿ ಬದುಕುವನು ಎಂದು ಭಾಷಾಂತರಿಸಬಹುದಾದ ಈ ಪದದ ಬಳಕೆ 1 ಕೊರಿ. 15:36,45 ವಚನಗಳಲ್ಲಿ ಕಾಣಬಹುದು. ಯಾವುದೇ ಸಂಶಯವಿಲ್ಲದೆ ಮಾನವನಿಗೆ ದೈಹಿಕ ಪುನರುತ್ಥಾನವಾಗುತ್ತದೆ ಎಂದು ಈ ಪದ ತಿಳಿಸುವಂತದ್ದಾಗಿದೆ. ಒಬ್ಬ ಮನುಷ್ಯನು ಸತ್ತು ಪುನ: ಬದುಕುತ್ತಾನೆಯೇ ಯೋಬ. 14:14 ರಲ್ಲಿ ಭಕ್ತನಾದ ಯೋಬನು ಕೇಳಿದನು ಅದಕ್ಕೆ ಉತ್ತರವಾಗಿ ಹೊಸ ಒಡಂಬಡಿಕೆಯಲ್ಲಿ ಯೋಹಾ. 11:25–26ರಲ್ಲಿ ಕರ್ತನಾದ ಯೇಸುಕ್ರಿಸ್ತನು "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು; ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವುದಿಲ್ಲ".

ಕರ್ತನಾದ ಯೇಸುಕ್ರಿಸ್ತನು ಹಾಗೂ ಆದಿ ಅಪೋಸ್ತಲರ ಕಾಲಗಳಲ್ಲಿಯೂ ಶಾರೀರಿಕ ಪುನರುತ್ಥಾನಕ್ಕೆ ವಿರುದ್ಧವಾದ ಉಪದೇಶಗಳಿದ್ದವು (ಮತ್ತಾ. 22:23, ಅ.ಕೃ. 17:32, 23:8–9, 1 ಕೊರಿ. 15:12).

**ಸತ್ಯವೇದದಲ್ಲಿ 2 ವಿಧವಾದ ಪುನರುತ್ಥಾನಗಳನ್ನು ನಾವು ಕಲಿಯಬಹುದು.**

| **ಪ್ರಥಮ ಪುನರುತ್ಥಾನ** | **ಕಡೆ ಪುನರುತ್ಥಾನ** |
|---|---|
| 1. ನೀತಿವಂತರ ಪುನರುತ್ಥಾನ | 1. ಅನೀತಿವಂತರ ಪುನರುತ್ಥಾನ |
| 2. ಜೀವಕ್ಕಾಗಿ ಪುನರುತ್ಥಾನ | 2. ಶಿಕ್ಷೆಗಾಗಿ ಪುನರುತ್ಥಾನ |
| 3. ಪ್ರತಿಫಲಕ್ಕಾಗಿ ಪುನರುತ್ಥಾನ | 3. ನ್ಯಾಯತೀರ್ಪಿಗಾಗಿ ಪುನರುತ್ಥಾನ |
| 4. ರಕ್ಷಣೆಗಾಗಿ ಪುನರುತ್ಥಾನ | 4. ಬೆಂಕಿ ಗಂಧಕಗಳಿಂದ ಉರಿಯುವ ಕೆರೆಯಾದ ನರಕದಲ್ಲಿಹಾಕಲ್ಪಡುವ ಪುನರುತ್ಥಾನ. |

1) **ತಾತ್ಕಾಲಿಕ ಪುನರುತ್ಥಾನ** ಅಂದರೆ ಪುನರುತ್ಥಾನ ಹೊಂದಿದವರು ಯಾವ ಶರೀರದಲ್ಲಿ ಸತ್ತರೋ ಅದೇ ಶರೀರದಲ್ಲಿ ತಿರುಗಿ ಜೀವ ಹೊಂದಿ ಎದ್ದು ಸ್ವಲ್ಪಕಾಲ ಜೀವಿಸುವುದಕ್ಕೆ ತಾತ್ಕಾಲಿಕ ಪುನರುತ್ಥಾನೆಂದು ಹೇಳುತ್ತಾರೆ.

**ತಾತ್ಕಾಲಿಕ ಪುನರುತ್ಥಾನ ಹೊಂದಿದವರು ಹಳೆ ಒಡಂಬಡಿಕೆಯಲ್ಲಿ**

1. ಚಾರೆಪ್ತಾ ವಿಧವೆಯ ಮಗ (1 ಅರಸು. 17:21–22).
2. ಶೂನೇಮಿಳ ಮಗ (2 ಅರಸು. 4:34–35).
3. ಎಲೀಷನ ಸಮಾಧಿಗೆ ತಗಲಿದ ವ್ಯಕ್ತಿಯ ಶವಜೀವ ಹೊಂದಿ ಎದ್ದೇಳುವಂತದ್ದು (2 ಅರಸು. 13:21).

**ಹೊಸ ಒಡಂಬಡಿಕೆಯಲ್ಲಿ ತಾತ್ಕಾಲಿಕ ಪುನರುತ್ಥಾನ**

1. ನಾಯಿನೂರಿನ ವಿಧವೆಯ ಮಗನನ್ನು ಕ್ರಿಸ್ತನು ಎಬ್ಬಿಸಿದನು (ಲೂಕ. 7:11–16).
2. ಅಧಿಕಾರಿಯ ಮಗಳನ್ನು ಕರ್ತನಾದ ಯೇಸು ಎಬ್ಬಿಸಿದನು (ಲೂಕ. 8:49–56)
3. ಲಾಜರನನ್ನು ಕರ್ತನಾದ ಯೇಸುಕ್ರಿಸ್ತನು ಎಬ್ಬಿಸಿದನು (ಯೋಹಾ. 11:43–44).
4. ದೊರ್ಕಳೆಂಬ ವಿಧವೆಯನ್ನು ಪೇತ್ರನು ಎಬ್ಬಿಸಿದನು (ಅ.ಕೃ.

ಯಥಾರ್ಥವಂತರ ಆಶೀರ್ವಾದದಿಂದ ಪಟ್ಟಣವು ಉನ್ನತಿಗೆ ಬರುವದು (ಜ್ಞಾನೋ. 11:11).

9:36–40).

5. ಯೂತಿಖನೆಂಬ ಯೌವನಸ್ಥನನ್ನು ಅಪೋಸ್ತಲನಾದ ಪೌಲನು ಎಬ್ಬಿಸಿದನು (ಅ.ಕೃ. 20:9–12).

ಇವರೆಲ್ಲರು ಸಾಯುವಾಗ ಯಾವ ಶರೀರದಲ್ಲಿ ಇದ್ದರೋ ಪುನರ್‌ಜೀವ ಹೊಂದಿದಾಗಲೂ ಅದೇ ಶರೀರದಲ್ಲಿ ಇದ್ದರು. ಇದೇ ತಾತ್ಕಾಲಿಕ ಪುನರುತ್ಥಾನವಾಗಿದೆ.

2) **ಶಾಶ್ವತ ಪುನರುತ್ಥಾನ:** ಭವಿಷತ್ ಕಾಲದಲ್ಲಿ ಕ್ರೈಸ್ತ ವಿಶ್ವಾಸಿಗಳು ಮಹಿಮೆಯ ಶರೀರದೊಂದಿಗೆ ಜೀವಿತರಾಗಿ ಎದ್ದು ಬರುವುದಕ್ಕೆ ನಿತ್ಯ ಪುನರುತ್ಥಾನ ಎಂದು ಕರೆಯುತ್ತೇವೆ. ಇದರಲ್ಲಿ ಅನೇಕ ತರಗತಿಗಳಿವೆ. 1 ಕೊರಿ. 15:23ರಲ್ಲಿ **"**ಪ್ರತಿಯೊಬ್ಬನು ತನ್ನ ತರಗತಿಯಲ್ಲಿರುವನು. ಕ್ರಿಸ್ತನು ಪ್ರಥಮ ಫಲ; ತರುವಾಯ ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದು ಬರುವರು**"**. ಇಲ್ಲಿ ಹೇಳಿರುವ ತರುವಾಯ ಎಂಬ ಶಬ್ದದ ಮೂಲ ಪದದ ಅರ್ಥವು ಒಂದು ಕಾಲ ಮಿತಿಯನ್ನು ತೋರಿಸುತ್ತದೆ. ಹೇಗೆಂದರೆ ಪ್ರಥಮ ಫಲವಾದ ಕ್ರಿಸ್ತನ ಪುನರುತ್ಥಾನವು ನಡೆದು ಇವತ್ತಿಗೆ 1980 ವರ್ಷಗಳು ಕಳೆದಿದ್ದು ಆದರೆ ಪುನರುತ್ಥಾನದ ಎರಡನೆ ತರಗತಿಯಾದ ದೇವ ಜನರ ಪುನರುತ್ಥಾನ ಇಂದಿಗೂ ನಡೆದಿಲ್ಲ. ಈ ಎರಡು ಪುನರುತ್ಥಾನಗಳ ನಡುವೆ ಒಂದು ಕಾಲಮಿತಿಯನ್ನು ಕರ್ತನು ನಿರ್ಧರಿಸಿದ್ದಾನೆ. ಆದ್ದರಿಂದಲೇ ಪೌಲನು ಮೇಲಿನ ವಾಕ್ಯದಲ್ಲಿ ತರುವಾಯ ಎಂಬ ಪದವನ್ನು ಉಪಯೋಗಿಸಿರುವುದು ಈ ಕಾಲಾವಧಿಯು ಎಷ್ಟು ಸಮಯದವರೆಗೆ ಮುಂದುವರೆಯುತ್ತದೆಂದು ಯಾರಿಂದಲೂ ಹೇಳಲು ಅಸಾಧ್ಯ. ಅದು ತಂದೆಯಾದ ದೇವರು ತನ್ನ ಅಧಿಕಾರದಲ್ಲಿಟ್ಟು ಕೊಂಡಿರುವ ಕಾಲವಧಿಯಾಗಿದೆ.

ದೇವ ಜನರು ಪುನರುತ್ಥಾನವಾದ ಮೇಲೆ ಸಮಾಪ್ತಿಗೊಳ್ಳುವುದರೊಳಗೆ ಸಾವಿರ ವರುಷದ ಕಾಲಮಿತಿಯಿದೆ. ಅಂದರೆ ದೇವ ಜನರ ಪುನರುತ್ಥಾನವಾದ ಮೇಲೆ ಸಾವಿರ ವರ್ಷದ ಕ್ರಿಸ್ತಾಡಳಿತವು ಮುಗಿದ ಮೇಲೆ ಕೊನೆಯ ಪುನರುತ್ಥಾನವು ನಡೆಯುತ್ತದೆ. ಈ ಪುನರುತ್ಥಾನವೇ ನ್ಯಾಯತೀರ್ಪಿಗಾಗಿರುವ ದುಷ್ಟರ ಪುನರುತ್ಥಾನ (ಪ್ರಕ. 20:13 ಯೋಹಾ. 5:29). (ಉಪದ್ರವಸ್ಥಳ Tormene place ನಲ್ಲಿರುವ ಆತ್ಮಗಳು ಬಿಳಿ ಸಿಂಹಾಸನದ ನ್ಯಾಯತೀರ್ಪಿಗೋಸ್ಕರ ಅವರಿಗೆ ಪುನರುತ್ಥಾನವಾಗುತ್ತದೆ). ಆದುದರಿಂದಲೇ ಪೌಲನು 1 ಕೊರಿ. 15:23ರ ವಾಕ್ಯದ ನಂತರ 24 ವಾಕ್ಯದಲ್ಲಿ ಸಮಾಪ್ತಿ ಎಂದು ಎಚ್ಚರಿಸಿದ್ದಾನೆ. 1 ಕೊರಿ. 15:23 ಹಾಗೂ 24 ವಾಕ್ಯಗಳಲ್ಲಿ ಕಾಣುವ ವಿವಿಧ ಪುನರುತ್ಥಾನಗಳ ನಡುವೆ ಅನೇಕ ವರ್ಷಗಳ ಕಾಲಮಿತಿಯಿದೆ ಎಂದು ಸತ್ಯವೇದದ ಮೂಲಕ ತಿಳಿದುಕೊಳ್ಳಬಹುದು. ಪ್ರತಿಯೊಬ್ಬನು ತನ್ನ ತರಗತಿಯಲ್ಲಿರುವನು ಎಂಬ ಮಾತು ಅರ್ಥ ಗರ್ಬಿತವಾಗಿದೆ. ಈ ಪದವನ್ನು ಸಾಧಾರಣವಾಗಿ ಸೈನಿಕರ ದರ್ಜೆಯನ್ನು ಸೂಚಿಸುವ ವೇಳೆಯಲ್ಲಿ ಉಪಯೋಗಿಸುತ್ತಿದ್ದರು. ಒಬ್ಬರ ಹಿಂದೆ ಒಬ್ಬರಂತೆ ಶಿಸ್ತಿನಿಂದ ಹೊರಡುವುದಕ್ಕೆ ತರಗತಿ ಎಂದು ಹೇಳುತ್ತಾರೆ.

ಮುಂದುವರಿಯುವದು....

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

## ಜ್ಞಾನಕ್ಕಾಗಿಪ್ರಶ್ನೆಗಳು : ನಮ್ಮ ಪ್ರಶ್ನೆ ನಿಮ್ಮ ಉತ್ತರ

1. **ನೀರಿನಲ್ಲಿರುವ ಗಾಳಿಯ ಗುಳ್ಳೆಯು ಹೊಳೆಯುವುದಕ್ಕೆ ಕಾರಣ ಯಾವುದು?**
2. **ಆಲಮರದಿಂದ ಇಳಿಬಿದ್ದಿರುವ ದಪ್ಪವಾದ ಬೇರುಗಳ ಹೆಸರು ಏನು?**
3. **ಸೌರವ್ಯೂಹದಲ್ಲಿ ಅತ್ಯಂತ ದೂರದಲ್ಲಿ ಕಾಣಿಸುವ ಕಾಯ ಯಾವುದು?**
4. **ಗಾಜಿನ ಮೇಲೆ ಕೆತ್ತನೆ ಮಾಡಲು ಬಳಸುವ ಆಮ್ಲ ಯಾವುದು?**
5. **ನರ್ಮದಾ ಬಚಾವೋ ಆಂದೋಲನ ನಾಯಕ ಯಾರು?**
6. **ವಿದ್ಯುತ್ ಬಲ್ಫ್‌ನಲ್ಲಿರುವ ಫಿಲಮೆಂಟ್‌ನ್ನು ಯಾವುದರಿಂದ ಮಾಡಲಾಗಿದೆ ?**
7. **ಲೋಕದಲ್ಲಿ ಪ್ರಥಮವಾಗಿ ಫಾಕ್ಟರಿ ನಿಯಮ ನಡೆಸಿಕೊಂಡು ಬಂದ ರಾಷ್ಟ್ರ ಯಾವುದು?**
8. **ಹ್ಯೂಮನ್ ಕಂಪ್ಯೂಟರ್ ಎಂದು ಕರೆಯಲ್ಪಡುವ ಮಹಿಳೆ ಯಾರು?**
9. **ಸಿಸ್ಮೋಲಜಿ ಏನ್ನನ್ನು ಅಭ್ಯಾಸಿಸುತ್ತದೆ?**
10. **ನವ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿ ಯಾರು?**

ಯೆಹೋವನು ಒಳ್ಳೆಯವನಿಗೆ ದಯಮಾಡುವನು (ಜ್ಞಾನೋ. 12:2).

# ದೇವರಲ್ಲಿ ಆನಂದಿಸುವುದು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ವಯುಸ್ಕರ ಸ್ವರ

**"ಇಸ್ರಾಯೇಲ್ಯರು ತಮ್ಮ ಸೃಷ್ಟಿಕರ್ತನಲ್ಲಿ ಹೆಚ್ಚಳಪಡಲಿ; ಚೀಯೋನಿನವರು ತಮ್ಮ ರಾಜನಲ್ಲಿ ಹರ್ಷಿಸಲಿ"** (ಕೀರ್ತ. 149:2). ಪ್ರವಾದಿಯಾದ ಹಬಕ್ಕೂಕನು ಎಲ್ಲವನ್ನು ಕಳೆದುಕೊಂಡು ಹೀನಸ್ಥಿತಿಯಲ್ಲಿದ್ದಾಗಲೂ ದೇವರಲ್ಲಿ ಆನಂದಿಸುತ್ತಾನೆ (ಹಬ. 3:17–18). ಊಚ್ ದೇಶದವರಲ್ಲಿ ಅತಿ ಶ್ರೀಮಂತನಾದ ಯೋಬನು ಶೋಧಿಸಲ್ಪಡುವಾಗ ಎಲ್ಲವನ್ನು ಕಳೆದು ಕೊಂಡಾಗಲೂ ದೇವರನ್ನು ಸ್ತುತಿಸುವುದನ್ನು ಮರೆಯಲಿಲ್ಲ (ಯೋಬ. 1:21). "ನಿನ್ನ ಪ್ರಜೆಯಾದ ನಾವು ನಿನ್ನಲ್ಲಿ ಆನಂದಿಸುವಂತೆ ನೀನು ನಮ್ಮನ್ನು ಚೈತನ್ಯಪಡಿಸುವದಿಲ್ಲವೋ?" (ಕೀರ್ತ. 85:6).

ಕೀರ್ತನೆಗಾರನು ಬರೆಯುತ್ತಾನೆ, **"ಯೆಹೋವನೇ, ನಿನ್ನ ಕ್ರಿಯೆಗಳಿಂದ ನನ್ನನ್ನು ಸಂತೋಷಪಡಿಸಿದ್ದೀ; ನಿನ್ನ ಕೆಲಸಗಳ ದೆಸೆಯಿಂದ ಉತ್ಸಾಹಧ್ವನಿ ಮಾಡುತ್ತೇನೆ"** (ಕೀರ್ತ. 92:4). ದಾವೀದನು ಬರೆಯುತ್ತಾನೆ, **"ಧಾನ್ಯದ್ರಾಕ್ಷೆಗಳು ಸಮೃದ್ಧಿಯಾಗಿ ಬೆಳೆದ ಸುಗ್ಗಿಕಾಲದಲ್ಲಿ ಅವರಿಗಿರುವ ಸಂತೋಷಕ್ಕಿಂತಲೂ ನೀನು ನನ್ನ ಹೃದಯಲ್ಲಿ ಹೆಚ್ಚಾದ ಆನಂದವನ್ನು ಉಂಟುಮಾಡಿದ್ದೀ"** (ಕೀರ್ತ. 4:7). ಪ್ರಿಯರೇ, ಲೋಕದಲ್ಲಿ ನಮ್ಮ ಪ್ರಯಾಸದಿಂದ ಸ್ವಲ್ಪ ಸಂತೋಷ ಹೊಂದಿಕೊಳ್ಳ ಬಹುದಾದರೂ ದೇವರಿಂದ ಬರುವ ಆನಂದವು ಎಲ್ಲವನ್ನು ಮೀರಿಸುವಂಥದ್ದಾಗಿದೆ.

ನಾವು ದೇವರಲ್ಲಿ ಇಂದು ಮನಪೂರ್ವಕವಾಗಿ ಆನಂದಿಸಲಾಗದಂತೆ ತಡೆಯುವ ಅನೇಕ ತಡೆಗಳಿರುತ್ತದೆ. ಅದನ್ನು ಒಂದೊಂದಾಗಿ ಧ್ಯಾನಿಸಿ ಆದರಿಂದ ಬಿಡುಗಡೆ ಹೊಂದಿ ಕ್ರಿಸ್ತನಲ್ಲಿ ಸಂತೋಷಿಸುವ.

1) **ರಹಸ್ಯವಾದ ಪಾಪಗಳು:** "ನಾನು ನನ್ನ ಪಾಪವನ್ನು ಅರಿಕೆಮಾಡದೆ ಇದ್ದಾಗ ದಿನವೆಲ್ಲಾ ನರಳುವದರಿಂದ ನನ್ನ ಎಲುಬುಗಳು ಸವೆದು ಹೋಗುತ್ತಿದ್ದವು" (ಕೀರ್ತ. 32:3). ಕರ್ತನ ವಾಕ್ಯ ತಿಳಿಸುತ್ತದೆ, "ನೀತಿವಂತರಾದರೋ ದೇವರ ಸನ್ನಿಧಿಯಲ್ಲಿ ಹರ್ಷಿಸುವರು; ಉಲ್ಲಾಸಿಸುವರು, ಆನಂದಧ್ವನಿ ಮಾಡುವರು" (ಕೀರ್ತ. 68:3).

   ಏದೆನ್ ತೋಟದಲ್ಲಿ (ಏದೆನ್ ಅಂದರೆ ಸಂತೋಷಪಡಿಸುವುದು ಎಂದರ್ಥ). ಸಂತೋಷಕರವಾದ ವಾತಾವರಣವಿತ್ತು. ಆ ಉದ್ಯಾವನದಲ್ಲಿ ನೋಟಕ್ಕೆ ರಮ್ಯ, ತಿನ್ನದ ರುಚಿಯಾದ ಫಲಗಳು, ಜೀವದಾಯಕ ವೃಕ್ಷ ಮುಂತಾದು ಮಾತ್ರವಲ್ಲ ಏದೆನ್ ತೋಟಕ್ಕೆ ಯಾವಾಗಲೂ ಯೆಹೋವ ದೇವರು ಸಂಚರಿಸುವುದರಿಂದ ನಿಜವಾಗಿಯೂ ಹೆಸರಿಗೆ ತಕ್ಕಂತೆ ಇತ್ತು. ಆದರೆ ವೈರಿಯಾದ ಸೈತಾನನ ಮಾತಿಗೆ ಕಿವಿಗೊಟ್ಟ ಹವ್ವಳು ದೇವರು ನಿಷೇಧಿಸಿದ ಹಣ್ಣನ್ನು ತಾನೂ ತಿಂದೂ, ಆದಾಮನಿಗೂ ಕೊಟ್ಟು ಪಾಪ ಮಾಡಿದ ಮೇಲೆ ದೇವರ ಮುಂದೆ ಬರಲಾಗದೆ ಮರದ ಹಿಂದೆ ಅಡಗಿ ನಿಂತರು. ಪಾಪವೇ ಅದಕ್ಕೆ ಕಾರಣವಾಗಿತ್ತು. ಇಂದು ಅನೇಕ ದೇವ ಮಕ್ಕಳು ಗುಪ್ತ ಪಾಪದಲ್ಲಿ ಬಿದ್ದು ಕ್ರಿಸ್ತನಿಗೆ, ಸಭೆಗೆ, ಮರೆಯಾಗಿ ಹೋಗುವರು. "ನೀತಿವಂತರಿಗೋಸ್ಕರ ಪ್ರಕಾಶವೂ ಯಥಾರ್ಥ ಹೃದಯವುಳ್ಳವರಿಗೆ ಸಂತೋಷವೂ ಬಿತ್ತಲ್ಪಟ್ಟಿವೆ. ನೀತಿವಂತರೇ, ಯೆಹೋವನಲ್ಲಿ ಆನಂದಿಸಿರಿ; ಆತನ ಪರಿಶುದ್ಧನಾಮವನ್ನು ಕೊಂಡಾಡಿರಿ" (ಕೀರ್ತ. 97:11–12). ಮರೆಮಾಡಿದ ಪಾಪಗಳು ನಮ್ಮ ಆತ್ಮೀಕ ಸಂತೋಷವನ್ನು ನಷ್ಟಪಡಿಸುತ್ತದೆ. ಆ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗವಾಗಲೇ ಕರ್ತನ ಆತ್ಮನು ತನ್ನ ಸಂತೋಷದಿಂದ ತುಂಬಿಸುವನು. **"ನನ್ನ ಪಾಪವನ್ನು ಮರೆಮಾಡದೆ ನಿನಗೆ ನನ್ನ ದೋಷವನ್ನು ತಿಳಿಸಿದೆನು. ನೀನು ನನ್ನ ಅಪರಾಧ ಪಾಪಗಳನ್ನು ಪರಿಹರಿಸಿ ಬಿಟ್ಟೆ"** (ಕೀರ್ತ. 32:5). **ಉತ್ಸಾಹಧ್ವನಿಯೂ ಜಯಘೋಷವೂ ನೀತಿವಂತರ ಗುಡಾರಗಳಿಲ್ಲಿವೆ.** (ಕೀರ್ತ.118:15)

2) **ಆತ್ಮೀಕವಾದ ಗರ್ವ:** ದೀನರು ಹರ್ಷಿಸುವರು (ಕೀರ್ತ. 69:32). ನಾವು ಸಾಮಾನ್ಯವಾಗಿ ಆತ್ಮೀಕವಾಗಿ ಬೆಳೆಯುವಾಗ ಗರ್ವದಿಂದ ಬಿದ್ದು ಆತ್ಮೀಕ ಜೀವಿತವನ್ನು ನಷ್ಟಪಡಿಸುವಂತೆ ಸೈತಾನನು ಪ್ರೇರೆಪಿಸಿದನು. "ಗರ್ವದಿಂದ ಭಂಗ; ಉಬ್ಬಿನಿಂದ ದೊಬ್ಬು" (ಜ್ಞಾನೋ. 16:18). "ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ" (ಯಾಕೋ. 4:6). ಸತ್ಯವೇದ ತಿಳಿಸುತ್ತದೆ, "ಯಾರೂ ತನ್ನ ಯೋಗ್ಯತೆಗೆ ಮೀರಿ ತನ್ನನ್ನು ಭಾವಿಸಿಕೊಳ್ಳದೆ ದೇವರು ಒಬ್ಬೊಬ್ಬನಿಗೆ ಎಂಥೆಂಥ ವಿಶ್ವಾಸ ಬಲವನ್ನು ಕೊಟ್ಟನೋ ಅದಕ್ಕೆ ತಕ್ಕ ಹಾಗೆ ನ್ಯಾಯವಾದ ಅಭಿಪ್ರಾಯದಿಂದ ತನ್ನನ್ನು ಭಾವಿಸಿಕೊಳ್ಳಬೇಕು" (ರೋಮ. 12:3). "ಅವರ ಮೇಲೆ ಉಬ್ಬಿಕೊಂಡು ಬಂದದರಿಂದ ಅವರ ಹೆಮ್ಮೆಯ ನಿಮಿತ್ತವೇ ಅವರಿಗೆ ಈ ಗತಿಯಾಗುವುದು" (ಚೆಫ. 2:10). ಅರಸನಾದ ಉಜ್ಜೀಯನು ತಾನು ಬಲಿಷ್ಟನಾಗುವ ತನಕ ದೇವರ ಆಶ್ಚರ್ಯವಾದ ಸಹಾಯ ಹೊಂದಿದ್ದಾಗ ಆತನ ಕೀರ್ತಿ ದೂರದವರೆಗೂ ಹಬ್ಬಿ ಬಲಿಷ್ಟನಾದನು. ಆನಂತರ ಗರ್ವಿಷ್ಟನಾಗಿ ಯಾಜಕರು ಮಾತ್ರ ಹಾಕಬೇಕಾದ ಯೆಹೋವನ ಆಲಯದ ಧೂಪ ತಾನೇ ಹಾಕಲು ಮುಂದಾಗಿ ಕುಷ್ಟ ರೋಗ ಹೊಂದಿದನು (2 ಪೂರ್ವ. 26:15–17). **"ಗರ್ವವು ಮನುಷ್ಯನನ್ನು ದೀನಸ್ಥಿತಿಗೆ ತರುವದು; ದೀನಮನಸ್ಸುಳ್ಳವನು ಮಾನವನ್ನು ಪಡೆಯುವನು"** (ಜ್ಞಾನೋ. 29:23).

ಮುಂದುವರಿಯುವದು.......

**ಪಾ॥ ರೊನಾಲ್ಡ್ ಮಚಾದೋ.**
ಬೇತೇಲ್ ಚರ್ಚ್ ಕಾಮಗೆರೆ.

ಯೆಹೋವನ ಭಯವು ಜೀವದಾಯಕವು ಭಯಭಕ್ತಿಯುಳ್ಳವನು ತೃಪ್ತನಾಗಿ ನೆಲೆಗೊಳ್ಳುವನು
(ಜ್ಞಾನೋ. 19:23).

# ಪ್ರಶ್ನೋತ್ತರಗಳ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಪ್ರಶ್ನೆ: ಪ್ರವೀಣ್ ಡಿ'ಸೋಜಾ ದುಬೈ. ಪರಿಶುದ್ಧಾತ್ಮನ ಸ್ನಾನ ಎಂದರೇನು? ಪ್ರತಿಯೊಬ್ಬರು ಪರಿಶುದ್ಧಾತ್ಮನ ಸ್ನಾನವನ್ನು ಹೊಂದಲು ಸಾಧ್ಯವೇ? ಪರಿಶುದ್ಧಾತ್ಮನ ಸ್ನಾನದ ಅವಶ್ಯಕತೆ ಏನು? ಪರಿಶುದ್ಧಾತ್ಮನ ಅಭಿಷೇಕ ಹೇಗೆ ಹೊಂದುವುದು ವಿವರಿಸಿರಿ? ಹಾಗೂ ದೇವರ ತ್ರಯೇಕತ್ವದ ಬಗ್ಗೆಯೂ ವಿವರಿಸಿರಿ?

ಇದು ಒಬ್ಬ ಕ್ರೈಸ್ತ ವಿಶ್ವಾಸಿಯಾದವನು ಕೇಳುವಂತಹ ಒಳ್ಳೆಯ ಪ್ರಶ್ನೆಯಾಗಿದೆ. ನಾನು ದೇವರ ಸ್ವರ ಮಾಸ ಪತ್ರಿಕೆಯಲ್ಲಿ ಅನೇಕ ಸಾರಿ ಪರಿಶುದ್ಧಾತ್ಮನ ಕುರಿತು ವಿವರಿಸುತ್ತೇನೆ. ಆದರೂ ನೀವು ಕೇಳಿದ ಪ್ರಶ್ನೆಗೆ ಅನುಸಾರವಾಗಿ ವಿವರಿಸಲು ಇಷ್ಟಪಡುತ್ತೇನೆ. ಪರಿಶುದ್ಧಾತ್ಮನ ಸ್ನಾನದ ಕುರಿತು ನಾವು ಧ್ಯಾನಿಸವುದಕ್ಕಿಂತ ಮೊದಲು ಪರಿಶುದ್ಧಾತ್ಮನ ಕುರಿತು ಧ್ಯಾನಿಸುವುದು ಒಳ್ಳೆಯದು. ನಂತರ ಪರಿಶುದ್ಧಾತ್ಮನ ಸ್ನಾನದ ಕುರಿತು ಅರ್ಥ ಮಾಡಿಕೊಳ್ಳಲು ಸುಲಭವಾಗುತ್ತದೆ.

1. ಪರಿಶುದ್ಧಾತ್ಮನು ಯಾರು?
2. ಪರಿಶುದ್ಧಾತ್ಮನ ಸತ್ಯವೇದದಲ್ಲಿ ಕೆಲವು ಹೆಸರುಗಳು
3. ಹಳೆ ಒಡಂಬಡಿಕೆಯ ಅಭಿಷೇಕಗಳು
4. ಪರಿಶುದ್ಧಾತ್ಮನ ಅಭಿಷೇಕ (ಸ್ನಾನ) ಅಂದರೇನು?
5. ಪರಿಶುದ್ಧಾತ್ಮನ 3 ವಿಧವಾದ ಅನುಭವಗಳು
6. ಪರಿಶುದ್ಧಾತ್ಮನ ಅಭಿಷೇಕದ ಉದ್ದೇಶವೇನು?
7. ಪರಿಶುದ್ಧಾತ್ಮನ ಅಭಿಷೇಕ ಹೇಗೆ ಹೊಂದುವುದು
8. ಸತ್ಯವೇದದಲ್ಲಿ ಪರಿಶುದ್ಧಾತ್ಮನ ಅಭಿಷೇಕ ಹೊಂದಿದವರು

**1) ಪರಿಶುದ್ಧಾತ್ಮನು ಯಾರು?**

1. ಪರಿಶುದ್ಧಾತ್ಮನು ತ್ರೈಯೇಕತ್ವದ ಮೂರನೆಯ ವ್ಯಕ್ತಿ.
2. ಪರಿಶುದ್ಧಾತ್ಮನು ದೇವರಾಗಿದ್ದಾನೆ.
3. ಪರಿಶುದ್ಧಾತ್ಮನು ನಮ್ಮ ಹಾಗೆ ವ್ಯಕ್ತಿತ್ವವುಳ್ಳವನು
4. ಪರಿಶುದ್ಧಾತ್ಮನು ಕ್ರಿಸ್ತ ವಿಶ್ವಾಸಿಗಳ ಸಹಾಯಕನು

**1) ಪರಿಶುದ್ಧಾತ್ಮನು ತ್ರಯೇಕತ್ವದ ಮೂರನೆಯ ವ್ಯಕ್ತಿಯಾಗಿದ್ದಾನೆ:** ನಾವು ಆರಾಧಿಸುವ ಭೂಮ್ಯಾಕಾಶಗಳನ್ನು ಉಂಟು ಮಾಡಿದ ದೇವರು ತ್ರಯೇಕ ದೇವರಾಗಿದ್ದಾನೆ. ಅಂದರೆ ಮೂರು ದೇವರು ಅಲ್ಲ, ಮೂರು ಪ್ರತ್ಯೇಕವಾದ ವ್ಯಕ್ತಿತ್ವವುಳ್ಳವನು.

ಸತ್ಯವೇದದಲ್ಲಿ ತಂದೆಯನ್ನು ಮಗನಾದ ಯೇಸುಕ್ರಿಸ್ತನನ್ನು ಪರಿಶುದ್ಧಾತ್ಮನನ್ನು ನಾವು ಕಾಣಬಹುದು.

ಧರ್ಮೋ. 6:4 ದೇವರು ಒಬ್ಬನೇ ಎಂದು ತಿಳಿಸುತ್ತದೆ. ಆದರೆ ಒಬ್ಬ ದೇವರು ಮೂರು ವ್ಯಕ್ತಿತ್ವಗಳನ್ನು ಸತ್ಯವೇದದಲ್ಲಿ ನಾವು ಕಾಣಬಹುದು.

ಮತ್ತಾ. 28:18–20 ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವೂ ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ. ಅವರಿಗೆ ತಂದೆಯ ಮಗನ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು.

2 ಕೊರಿ. 13:14 ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪವಿತ್ರಾತ್ಮನ ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ. ಸತ್ಯವೇದದಲ್ಲಿ ತ್ರೇಯೇಕ ದೇವರ ಸೇವೆಯನ್ನು ನಾವು ಗಮನಿಸಬಹುದು ಹಾಗೂ ತ್ರೇಯೇಕ ದೇವರು ಒಟ್ಟಾಗಿ ಸೇರಿ ಸೇವೆ ಮಾಡುವುದನ್ನು ಕಾಣಬಹುದು.

ಮುಂದುವರೆಯುವದು.......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

## ಡಿಜಿಎಮ್ ಬೇತೇಲ್ ಅಂಕಣ

- **ಪಾ॥ ಸುನಿಲ್ ಡಿ'ಸೋಜಾರವರು ಬೆಂಗಳೂರಿನ ಬೇತೇಲ್ ಎ.ಜಿ. ಕನ್ನಡ ಸಭೆಯಲ್ಲಿ ದೇವರ ಸೇವೆಯನ್ನು ಮಾಡಿ ಬರುವಂತೆ ಕರ್ತನು ಸಹಾಯಮಾಡಿದನು.**

ಭಯಪಡಬೇಡ, ನಾನು ನಿನ್ನನ್ನು ವಿಮೋಚಿಸಿದೆನಲ್ಲಾ, ನಿನ್ನ ಹೆಸರುಹಿಡಿದು ಕರೆದೆನಲ್ಲಾ; ನೀನು ನನ್ನವನೇ (ಯೆಶಾ. 43:1).

ಆರೋಗ್ಯ ಸ್ವರ

# ಆರೋಗ್ಯ ವರ್ಧನೆಗೆ ಜ್ಯೂಸ್ ಥೆರಪಿ

ಹಣ್ಣು ಮತ್ತು ತರಕಾರಿಗಳ ಜ್ಯೂಸ್‌ಗಳು ರೋಗ ನಿವಾರಕವೂ ಹೌದು, ಆರೋಗ್ಯ ಮತ್ತು ಸೌಂದರ್ಯ ವರ್ಧಕವೂ ಹೌದು. ಆಯಾ ಕಾಲದಲ್ಲಿ ಸಿಗುವ ಹಣ್ಣು ತರಕಾರಿಗಳನ್ನು ಬಳಸಿ ಜ್ಯೂಸ್ ತಯಾರಿಸಿ ಸೇವಿಸಿದರೆ ಹತ್ತು ಹಲವು ಕಾಯಿಲೆಗಳಿಗೆ ಉತ್ತಮ ಮನೆಮದ್ದು ಜ್ಯೂಸ್ ತಯಾರಿಸಲೂ ಸುಲಭ. ಸೇವಿಸಲೂ ರುಚಿಕರ. ಮನೆಯಲ್ಲೇ ನಿತ್ಯವೂ ತಯಾರಿಸಬಹುದು. ಈ ಆಹಾರರೂಪೀ ಔಷಧಿಗಳನ್ನು ಪ್ರಯೋಗಿಸಿ ರೋಗ ನಿವಾರಣೆಯನ್ನು, ಆರೋಗ್ಯ ವರ್ಧನೆಯನ್ನು ಮಾಡಬಹುದಲ್ಲವೆ?!

- ಕಬ್ಬಿನ ಜ್ಯೂಸ್ (ಕಬ್ಬಿನ ಹಾಲು) ಸ್ವಲ್ಪ ಶುಂಠಿರಸ ಬೆರೆಸಿ ನಿತ್ಯ ಸೇವಿಸಿದರೆ ಜಾಂಡಿಸ್ ರೋಗದಲ್ಲಿ ಹಿತಕರ.

- ಮದ್ಯಪಾನದಿಂದ ಉಂಟಾದ ಯಕೃತ್ ತೊಂದರೆ, ಅರಸಿನ ಕಾಮಾಲೆ ಮುಂತಾದ ರೋಗಗಳಲ್ಲಿ ಪಪ್ಪಾಯಿ, ಮೂಸಂಬಿ, ಕಿತ್ತಳೆ ಹಾಗೂ ದ್ರಾಕ್ಷೆಬೆರೆಸಿ ಜ್ಯೂಸ್ ಮಾಡಿ ಕುಡಿದರೆ ಪರಿಣಾಮಕಾರಿ. 2–3 ತಿಂಗಳು ಈ ಸಮಯದಲ್ಲಿ ಮದ್ಯಪಾನ, ಧೂಮಪಾನ, ಎಣ್ಣೆಯಲ್ಲಿ ಕರಿದ ಆಹಾರ, ಅತಿಯಾದ ಖಾರ ಮತ್ತು ಹುಳಿರಸಯುಕ್ತ ಆಹಾರವನ್ನು ಸೇವಿಸಕೂಡದು.

- ಶುಷ್ಕ ಕಳಾಹೀನ ಚರ್ಮವನ್ನು ಸ್ನಿಗ್ಧ ಹಾಗೂ ಕಾಂತಿಯುತಗೊಳಿಸಲು ನಿತ್ಯವೂ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಕಲ್ಲಂಗಡಿ ಹಣ್ಣಿನ ಜ್ಯೂಸ್ ಸೇವಿಸಿದರೆ ಪರಿಣಾಮಕಾರಿ. ಜೊತೆಗೆ ಕಲ್ಲಂಗಡಿ ಹಣ್ಣಿನ ರಸವನ್ನು ಒಣ ಚರ್ಮವಿರುವ ಮುಖ, ಕೈಕಾಲುಗಳಿಗೆ ಲೇಪಿಸಿ 20 ನಿಮಿಷದ ಬಳಿಕ ತೊಳೆಯಬೇಕು. ಇದು ಉತ್ತಮ ಮಾಯಿಶ್ಚರೈಸರ್!

- ಸೇಬುಹಣ್ಣು, ಕ್ಯಾರೆಟ್ ಹಾಗೂ ನೆಲ್ಲಿಕಾಯಿ ಇವುಗಳನ್ನು ಬೆರೆಸಿ ತಯಾರಿಸಿದ ಜ್ಯೂಸ್ ನಿತ್ಯ ಸೇವಿಸಿದರೆ ಉತ್ತಮ ಗರ್ಭಾಶಯದ ಟಾನಿಕ್ ಹಾಗೂ ಮುಟ್ಟು ನಿಯಮಿತವಾಗಿ ಉಂಟಾಗುತ್ತದೆ. 3–6 ತಿಂಗಳು ಈ ಜ್ಯೂಸ್ ನಿತ್ಯ ಸೇವಿಸಿದರೆ ಗರ್ಭಧಾರಣೆಯಲ್ಲೂ ಫಲಕಾರಿ.

- ಕಿತ್ತಳೆ, ಕ್ಯಾರೆಟ್ ಮತ್ತು ಶುಂಠಿ ಬೆರೆಸಿ ಜ್ಯೂಸ್ ಮಾಡಿ ಸೇವಿಸಿದರೆ ಶೀತ, ನೆಗಡಿ, ಕೆಮ್ಮು ಕಡಿಮೆಯಾಗುತ್ತದೆ.

- ಸ್ಟ್ರಾಬೆರಿ ಹಣ್ಣಿನಲ್ಲಿ ವಿಟಮಿನ್ ಸಿ ಅಧಿಕವಾಗಿದೆ ಹಾಗೂ ಕೊಲ್ಲೆಜನ್ ಪ್ರೋಟಿನ್ ಸಮೃದ್ಧವಾಗಿದೆ. ಈ ಹಣ್ಣಿನ ಜ್ಯೂಸ್ ಸೇವಿಸಿದರೆ ಚರ್ಮದ ಕಾಂತಿ ಹೆಚ್ಚುತ್ತದೆ.

- ಬಿಸಿನೀರಿಗೆ ಲಿಂಬೆಹಣ್ಣಿನ ಜ್ಯೂಸ್ ಹಾಗೂ ಉಪ್ಪು ಬೆರೆಸಿ ಕುಡಿದರೆ ನೆಗಡಿ, ಥಂಡಿ ಗುಣವಾಗುತ್ತದೆ.

- ಒಂದು ಕಪ್ ನೀರಿಗೆ ಒಂದು ಲಿಂಬೆಹಣ್ಣಿನ ರಸ ಹಾಗೂ 2–4 ಚಮಚ ಶುದ್ಧ ಜೇನು ಬೆರೆಸಿ ಜ್ಯೂಸ್ ಮಾಡಿ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ದೇಹದ ಅಧಿಕ ತೂಕ ಕಡಿಮೆಯಾಗುತ್ತದೆ.

- ಮಣ್ಣಿನ ಪಾತ್ರೆಯಲ್ಲಿ ತೊಳೆದ 15 ಒಣದ್ರಾಕ್ಷೆ ಹಾಗೂ ಚಿಟಿಕೆ ಕೇಸರಿಯನ್ನು ಒಂದು ಕಪ್ ನೀರಿನಲ್ಲಿ ಹಾಕಿ ನೆನೆಸಿ ಇಡಬೇಕು. ರಾತ್ರಿ ಈ ಮಣ್ಣಿನ ಪಾತ್ರೆಯಲ್ಲಿ ನೆನೆಸಿದ ಒಣದ್ರಾಕ್ಷೆ ಹಾಗೂ ಕೇಸರಿಯನ್ನು ಮರುದಿನ ಅದೇ ನೀರಿನಲ್ಲಿ ಅರೆದು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಕುಡಿದರೆ ಈ ಜ್ಯೂಸ್ ಉತ್ತಮ ಹಾರ್ಟ್ ಟಾನಿಕ್; ಹೃದ್ಯ.

- ಅನಾನಾಸ್ ಹಣ್ಣಿನ ಜ್ಯೂಸ್‌ಗೆ ಸ್ವಲ್ಪ ಕಲ್ಲುಸಕ್ಕರೆ, ಮೆಣಸಿನಕಾಳಿನ ಹುಡಿ ಬೆರೆಸಿ ಕುಡಿದರೆ ಅಗ್ನಿಮಾಂದ್ಯ ನಿವಾರಣೆಯಾಗುತ್ತದೆ. ಈ ಹಣ್ಣಿನಲ್ಲಿ ಬ್ರೊಮೆಲಿನ್ ಎಂಬ ಕಿಣ್ವವಿದ್ದು ಇದು ಪಚನ ಶಕ್ತಿಯನ್ನು ಹೆಚ್ಚಿಸುತ್ತದೆ.

- ದೀರ್ಘಾಕಾಲೀನ ರಕ್ತಹೀನತೆಯಿಂದ ಬಳಲುವವರು ತೊಳೆದ ಒಣದ್ರಾಕ್ಷೆ (5–6), ಒಣ ಅಂಜೂರ (3–4) ಒಂದು ಮಣ್ಣಿನ ಪಾತ್ರೆಯಲ್ಲಿ ಒಂದು ಲೋಟ ನೀರಲ್ಲಿ ನೆನೆಸಿಡಬೇಕು. ರಾತ್ರಿ ನೆನೆಸಿ ಮರುದಿನ ಬೆಳಿಗ್ಗೆ ಅದೇ ನೀರಲ್ಲಿ ಅರೆದು ಒಣದ್ರಾಕ್ಷಿ ಅಂಜೂರದ ಜ್ಯೂಸ್ ಕುಡಿದರೆ ರಕ್ತವೃದ್ಧಿಯಾಗುತ್ತದೆ (45–60ದಿನ).

- ಅಧಿಕ ಉಪ್ಪು, ಆಮ್ಲಪಿತ್ತದ ತೊಂದರೆ ಇರುವವರು ಕುಮಾರೀರಸ (ಎಲೊವೆರಾಜ್ಯೂಸ್) ಹಾಗೂ ನೆಲ್ಲಿಕಾಯಿಯ ರಸ 3:1 ಪ್ರಮಾಣದಲ್ಲಿ ಬೆರೆಸಿ ಖಾಲಿ ಹೊಟ್ಟೆಯಲ್ಲಿ ನಿತ್ಯ ಸೇವಿಸಿದರೆ ಆಮ್ಲೊಪಿತ್ತ, ಹೊಟ್ಟೆನೋವು, ಉರಿ, ಅಧಿಕ ಉಷ್ಣ ಪರಿಹಾರವಾಗುತ್ತದೆ.

- ಹಸಿ ಆಲೂಗಡ್ಡೆಯ ಜ್ಯೂಸ್ ಸೇವಿಸಿದರೆ ಚರ್ಮರೋಗದಲ್ಲಿ ಗುಣಕಾರಿ. ಹಸಿ ಆಲೂಗಡ್ಡೆಯಲ್ಲಿ 'ಪೊಟ್ಯಾಶ್' ಅಂಶವಿದ್ದು ಇದು ಚರ್ಮರೋಗದಲ್ಲಿ ಶಮನಕಾರಿ.

- ಹಸಿ ಆಲೂಗಡ್ಡೆಯೊಂದಿಗೆ 5–6 ಒಣದ್ರಾಕ್ಷೆ ಬೆರೆಸಿ ಜ್ಯೂಸ್ ಮಾಡಿ ರಾತ್ರಿ ಊಟಕ್ಕೆ ಮೊದಲು ನಿತ್ಯಸೇವಿಸಿದರೆ ಮಲಬದ್ಧತೆ ನಿವಾರಕ.

- ಮೂಲಂಗಿಯ ಎಳತು ಎಲೆಗಳ ಜ್ಯೂಸ್ ಸೇವಿಸುವುದರಿಂದ ಪಿತ್ತಕೋಶದ ಕಲ್ಲುಗಳು ಕರಗುತ್ತವೆ. ಮೂಲಂಗಿಯು ಉಪ್ಪು ತೀಕ್ಷ್ಣ ಹಾಗೂ ಭೇದನ ಗುಣ ಹೊಂದಿದ್ದು, ಎಳೆತು ಎಲೆಯ

ಯೆಹೋವನು ತನ್ನನ್ನು ನಿರೀಕ್ಷಿಸುವವರಿಗೂ ಹುಡುಕುವವರಿಗೂ ಮಹೋಪಕಾರಿಯಾಗಿದ್ದಾನೆ (ಪ್ರಲಾ. 3:25).

ಜ್ಯೂಸ್ 2–3 ತಿಂಗಳು ನಿತ್ಯ ಸೇವಿಸಿದರೆ ಪಿತ್ತಕೋಶದ ಕಲ್ಲುಗಳು ಇದರ ಪರಿಣಾಮದಿಂದ ಕರಗುತ್ತವೆ.

- ಹಾಗಲಕಾಯಿಯ ಜ್ಯೂಸ್ ನಿತ್ಯ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ಮಧುಮೇಹ ರೋಗ ನಿಯಂತ್ರಣಕ್ಕೆ ಬರುವುದು.
- ಒಣ ಅಂಜೂರ ಹಾಗೂ ಸೀಬೆಹಣ್ಣು ಬೆರೆಸಿ ಜ್ಯೂಸ್ ಮಾಡಿ ನಿತ್ಯ ಸೇವಿಸಿದರೆ ಮಲಬದ್ಧತೆ, ಮೂಲವ್ಯಾಧಿಗಳಲ್ಲಿ ಶಮನಕಾರಿ.
- ಕ್ಯಾರೆಟ್, ಬೀಟ್‌ರೂಟ್ ಮತ್ತು ಕ್ಯಾಬೇಜ್‌ಗಳ ಜ್ಯೂಸ್ ಅಥವಾ ಸೇಬುಹಣ್ಣು ಹಾಗೂ ಆಲೂಗಡ್ಡೆ ಇವುಗಳ ಜ್ಯೂಸ್ ಅಸ್ತಮಾದಲ್ಲಿ ಶಮನಕಾರಿ.
- ಬಾಳೆಹಣ್ಣಿನಲ್ಲಿ 'ಪೆಕ್ಟಿನ್' ಎಂಬ ದ್ರವ್ಯವಿದ್ದು ಬಾಳೆಹಣ್ಣು ಹಾಗೂ ಒಣದ್ರಾಕ್ಷೆ ಬೆರೆಸಿ ಜ್ಯೂಸ್ ಮಾಡಿ ಸೇವಿಸಿದರೆ ಮಲಬದ್ಧತೆ ನಿವಾರಕ.
- ಪಾಲಕ್ ಹಾಗೂ ಕ್ಯಾರೆಟ್ ಬೆರೆಸಿ ಜ್ಯೂಸ್ ಮಾಡಿದರೂ ಮಲಬದ್ಧತೆ ಮೂಲವ್ಯಾಧಿಗಳಲ್ಲಿ ಪರಿಣಾಮಕಾರಿ.
- ಸೇಬುಹಣ್ಣಿನಲ್ಲಿ ಅಧಿಕ ಫಾಸ್ಪರಸ್ ಅಂಶವಿದೆ. ಅಂತೆಯೇ ಕಬ್ಬಿಣದ ಅಂಶವೂ ಸಮೃದ್ಧವಾಗಿದೆ. ಸೇಬುಹಣ್ಣಿನ ಜ್ಯೂಸ್ ದೇಹ ಮತ್ತು ಮೆದುಳನ್ನು ಸುದೃಢಗೊಳಿಸುತ್ತದೆ.
- ಕ್ಯಾರೆಟ್, ಸೌತೆಕಾಯಿ ಮತ್ತು ಪಾಲಕ್ ಇವುಗಳ ಮಿಶ್ರಣದಿಂದ ಜ್ಯೂಸ್ ತಯಾರಿಸಿ ನಿತ್ಯ ಖಾಲಿ ಬೆಳಿಗ್ಗೆ ಸೇವಿಸಿದರೆ ಕೂದಲು ಸೊಂಪಾಗಿ ಬೆಳೆಯುತ್ತದೆ. ಈ ಮಿಶ್ರಣದಿಂದ ಹೇರ್‌ಪ್ಯಾಕ್ ಮಾಡಿ 20 ನಿಮಿಷದ ಬಳಿಕ ಕೂದಲು ತೊಳೆದರೆ ಹಿತಕರ.
- ಬೀಟರೂಟ್‌ನಲ್ಲಿ ಆ್ಯಂಟಿ ಆಕ್ಸಿಡೆಂಟ್ಸ್ ಅಧಿಕವಾಗಿ ಹಾಗೂ ಇದು ಕ್ಯಾನ್ಸರ್ ನಿರೋಧಕ ಗುಣ ಹೊಂದಿದೆ. ಬೀಟ್‌ರೂಟ್ ಜ್ಯೂಸ್‌ಗೆ ಅರಸಿನ ಹುಡಿ ಬೆರೆಸಿ ನಿತ್ಯ ಸೇವಿಸಿದರೆ ಕ್ಯಾನ್ಸರ್ ರೋಗಿಗಳ ಆರೋಗ್ಯ ಸುಧಾರಿಸುವುದು.
- ಮೂಲಂಗಿ ಉಷ್ಣ, ಭೇದಕ ಗುಣ ಹಾಗೂ ತೀಕ್ಷ್ಣ ಗುಣ ಹೊಂದಿರುವುದರಿಂದ ಮೂಲಂಗಿಯ ಜ್ಯೂಸನ್ನು ಖಾಲಿ ಹೊಟ್ಟೆಯಲ್ಲಿ ನಿತ್ಯ ಸೇವಿಸುವುದರಿಂದ ಮೂತ್ರದ ಕಲ್ಲುಗಳು ಕರಗುತ್ತವೆ.
- ಬಾಳೆಹಣ್ಣು, ಗೋಡಂಬಿ, ಬಾದಾಮಿ, ದ್ರಾಕ್ಷೆಬೆರೆಸಿ ಜ್ಯೂಸ್ ಮಾಡಿ ಬೆಳೆಯುವ ಮಕ್ಕಳಿಗೆ ನೀಡಿದರೆ ಹಿತಕರ.
- ಟೊಮೊಟೊದಲ್ಲಿ ಲೈಕೋಪಿನ್‌ನ ಅಂಶ ಅಧಿಕವಿದ್ದು ವಿಟಮಿನ್ ಎ, ವಿಟಮಿನ್ ಸಿ ಹಾಗೂ ಪೊಟ್ಯಾಶಿಯಂನಿಂದ ಸಮೃದ್ಧವಾಗಿದೆ. ಟೊಮೊಟೊ ಮತ್ತು ಕಿತ್ತಳೆ ಬೆರೆಸಿ ಜ್ಯೂಸ್ ಮಾಡಿ ಸೇವಿಸಿದರೆ ಚರ್ಮದ ಕಾಂತಿ ಹೆಚ್ಚುತ್ತದೆ, ನೆರಿಗೆಗಳು ಕಡಿಮೆಯಾಗುತ್ತವೆ, ಕೂದಲಿಗೂ ಹಿತಕರ.
- ಮೂತ್ರ ಉರಿ, ಮೂತ್ರಕಟ್ಟು ಇರುವ ಸಂದರ್ಭದಲ್ಲಿ ಎಳನೀರು ಹಾಗೂ ಸೌತೆಕಾಯಿಯ ಜ್ಯೂಸ್ ಬೆರೆಸಿ ದಿನಕ್ಕೆ 3–4 ಬಾರಿ ಕುಡಿದರೆ ಹಿತಕರ.
- ದಾಳಿಂಬೆಯ ಜ್ಯೂಸ್ ನಿತ್ಯ ಕುಡಿಯುವುದು ಹೃದ್ಯ, ಉತ್ತಮ ಹಾರ್ಟ್ ಟಾನಿಕ್.
- ತಾಜಾ ಅಂಜೂರ ಹಣ್ಣಿನ ಜ್ಯೂಸ್ ನಿತ್ಯ ಸೇವಿಸಿದರೆ ಉತ್ತಮ ಯಕೃತ್ ಉತ್ತೇಜಕ, ಜೀರ್ಣಕ್ಕೆ ಸಹಕಾರಿ.
- ಕ್ಯಾಬೇಜ್ ಜ್ಯೂಸ್ ನಿತ್ಯ ಖಾಲಿ ಹೊಟ್ಟೆಯಲ್ಲಿ ಕುಡಿದರೆ ಬೊಜ್ಜು ಕರಗುತ್ತದೆ.

*ಸಂಗ್ರಹ.*


## ಬೇಕಾಗಿದ್ದಾರೆ

**ದುಬೈಯಲ್ಲಿ ಮನೆಕೆಲಸ ಮಾಡಲು**

**ಇಬ್ಬರು ಹೆಂಗಸರು ಬೇಕಾಗಿದ್ದಾರೆ.**

ಆಸಕ್ತಿಯುಳ್ಳವರು PASS PORTನೊಂದಿಗೆ
ಕೂಡಲೇ ಸಂಪರ್ಕಿಸಬೇಕಾದ

**ದೂರವಾಣಿ ಸಂಖ್ಯೆ 9902334941, 9844265602, 08202589070.**


ನಾನು ನನ್ನ ಶ್ವಾಸವನ್ನು ನಿಮ್ಮಲ್ಲಿ ಹೊಗಿಸಿ ನಿಮ್ಮನ್ನು ಬದುಕಿಸಿ ನಿಮ್ಮ ದೇಶದಲ್ಲಿ ನೆಲೆಗೊಳಿಸುವೆನು (ಯೆಹೆ. 37:14).

# ಕರ್ತವ್ಯವನ್ನು ಅರಿತುಕೊಳ್ಳಿರಿ

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು.

ಹಬ್ಬವನ್ನು ಆಚರಿಸುವುದಕ್ಕಾಗಿ ಎಲ್ಲಾ ಸ್ತ್ರೀಪುರುಷರೂ, ಮಕ್ಕಳೂ ಎಲ್ಲಾ ಕಡೆಗಳಿಂದಲೂ ಬಂದಿದ್ದರಿಂದ ಆ ಪ್ರದೇಶವೇ ದೊಡ್ಡ ಜನಸ್ತೋಮವಾಗಿತ್ತು. ಕೆಲವರು ಗುಂಪಾಗಿ ನರ್ತಿಸುತ್ತಿದ್ದರು. ಇನ್ನಿತರರು ಅತ್ತಿಂದಿತ್ತ ಓಡಾಡುತ್ತಿದ್ದರು. ಎಲ್ಲರಿಗೂ ಬಹಳ ಸಂಭ್ರಮ ಆಗ ಸುಡುಬಿಸಿಲಿನ ಸಮಯದಲ್ಲಿ ಗುಂಪಿನಿಂದ ಒಂದು ಕರ್ಣಕಠೋರವಾದ ಕೂಗು ಕೇಳಿಬಂತು. ಒಬ್ಬನು ತಾನು ಅಪಾಯದಲ್ಲಿದ್ದೇನೆಂಬಂತೆ ಕೂಗಿಕೊಂಡನು. ಎಲ್ಲರ ಗಮನ ಅವನತ್ತ ಹೋಯಿತು. **"ಏನಾಯಿತು?"** ಎಂಬ ಪ್ರಶ್ನೆ ಒಬ್ಬರಿಂದ ಒಬ್ಬರಿಗೆ ಹರಡುತ್ತಾ ಹೋಯಿತು. ಕೆಲವರು ಕೂಗಿಕೊಂಡ ಆ ವ್ಯಕ್ತಿಗೆ ಹುಚ್ಚು ಹಿಡಿಯಿತು ಎಂದುಕೊಂಡರು ಆದರೆ ವಿಚಾರ ಅದಲ್ಲ.

ಈ ಒಂದು ಘಟನೆ ನನಗೆ ಯೆರೂಸಲೇಮಿನಲ್ಲಿ ನಡೆದ ಹಬ್ಬದ ಕೊನೆಯ ದಿನವನ್ನು ನೆನಪು ಮಾಡುತ್ತದೆ. ಎಲ್ಲಾ ದೇಶಗಳಿಂದ ಬಂದಂತಹ ಜನರು ದೇವರನ್ನು ನಿಜವಾದ ಅರ್ಥದಲ್ಲಿ ಸಂಧಿಸದೇ ಬಂದ ಹಾಗೆ ಹಿಂದಿರುಗಲು ಸಿದ್ಧರಾಗುತ್ತಿದ್ದರು. ಕ್ರಿಸ್ತನು, ಇಂತಹ ದೊಡ್ಡ ನಷ್ಟವನ್ನು ಅರಿತುಕೊಂಡು ಬೇರೇನು ಮಾಡಲಾರದೆ, **"ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ. ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು"** (ಯೋಹಾ. 7:37,38).

ಸಹಾಯ ಮಾಡಬೇಕೆಂಬ ಸದ್ಬಯಕೆಯಿಂದ ಯೇಸುವಿನ ಈ ಕೂಗು ಹೊರ ಬಂದಿತು. ನಮ್ಮ ಸುತ್ತುಮುತ್ತಲಿನ ಪರಿಸರದಲ್ಲಿರುವ ಅಗತ್ಯತೆ ಬಹು ದೊಡ್ಡದು. ಜನರು ಕ್ರಿಸ್ತ ರಹಿತ ಜೀವಿತದಲ್ಲಿಯೇ ಸಾಯುತ್ತಿದ್ದಾರೆ ಇದರಿಂದ ಉಂಟಾಗುತ್ತಿರುವ ನಷ್ಟವು ದೊಡ್ಡದು ಯೇಸುವು ತನ್ನ ಶಿಷ್ಯರೊಂದಿಗೆ ಈ ಕೆಲಸದ ಮಹತ್ವದ ಕುರಿತು ಮಾತನಾಡುವಾಗ, ಅವರನ್ನು ಕೊಯ್ಲಿಗೆ ಬಂದಿರುವ ದೊಡ್ಡ ಸುಗ್ಗೀ ಹೊಲಕ್ಕೆ ಹೋಲಿಸಿದ್ದಾನೆ ಮಾತ್ರವಲ್ಲದೆ ಕೆಲಸದವರು ಸ್ವಲ್ಪ ಎಂದು ಸಹ ಸೇರಿಸಿ ಹೇಳಿದ್ದಾನೆ (ಮತ್ತಾ. 9:37). ಇಂತಹ ದೊಡ್ಡ ಅಗತ್ಯತೆಯ ಕುರಿತು ಅನೇಕ ಕ್ರೈಸ್ತರಿಗೆ ಅರಿವೇ ಇಲ್ಲ. ಕರ್ತನಾದ ಯೇಸುಕ್ರಿಸ್ತನು ಪ್ರತಿದಿನವೂ **"ನನಗಾಗಿ ಯಾರು ಹೋಗುವಿರಿ? ಜನರ ಮಧ್ಯದಲ್ಲಿ ನಡೆಯಲು ಯಾರು ನನಗೆ ಕಾಲುಗಳಾಗುವರಿ, ಹಾಗೆಯೇ ನಾನು ಮಾತನಾಡಲು ಯಾರು ನನಗೆ ಬಾಯಾಗುವಿರಿ"** ಎಂದು ಬೇಡುತ್ತಾ ಕರೆಯುತ್ತಲೇ ಇದ್ದಾನೆ.

ಹೌದು ಪ್ರಿಯರೇ ದೇವದೂತರು ಈ ಕೆಲಸವನ್ನು ಮಾಡಲು ಅಪೇಕ್ಷಿತರಾಗಿರಬಹುದು ಆದರೆ ದೇವರು ಅವರನ್ನು ಉಪಯೋಗಿಸಲು ಆರಿಸಿಕೊಳ್ಳಲಿಲ್ಲ. ಮನುಷ್ಯರನ್ನು ಉಪಯೋಗಿಸುವುದೇ ಆತನ ಚಿತ್ತವಾಗಿದೆ. ಇಂದು ಪ್ರತಿಯೊಬ್ಬ ಕ್ರೈಸ್ತನು ವೈಯಕ್ತಿಕ ಸೌವಾರ್ತಿಕತೆಯಲ್ಲಿ ಪಣತೊಟ್ಟು ನಿಲ್ಲುವುದಾದರೆ, ಅನೇಕರು ತಮ್ಮ ಪಾಪದಿಂದ ಸಾಯುವುದಿಲ್ಲ ಮತ್ತು ಪ್ರಪಂಚದಲ್ಲಿ ಕ್ರಿಸ್ತನಿಗಾಗಿ ಅನೇಕರು ರಕ್ಷಿಸಲ್ಪಡುತ್ತಾರೆ.

ವೈಯಕ್ತಿಕ ಸೌವಾರ್ತಿಕತೆ ಎಂಬುದು ಇದು ದೇವರ ಯೋಜನೆಯಾಗಿದೆ. ಇದು ತಂದೆಯಾದ ದೇವರ ಹೃದಯದಿಂದ ಪ್ರಾರಂಭವಾಗಿದೆ **"ಆ ಮೇಲೆ ದೇವರು ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ; ..........ಅಂದನು"** (ಆದಿ. 1:26). ತನ್ನ ಸ್ವರೂಪವಾದ, ತನ್ನ ಹೋಲಿಕೆಯಾದ ಮನುಷ್ಯನೊಂದಿಗೆ ಹಂಚಿಕೊಂಡನು ಎಂಬುದು ಶುಭ ಸಮಾಚಾರವೇ ಸರಿ. ತನ್ನ ಸ್ವಂತ ಸಾರೂಪ್ಯವನ್ನೇ ಮನುಷ್ಯನೊಂದಿಗೆ ಹಂಚಿಕೊಂಡ ನಂತರ, ದೇವರು ಮನುಷ್ಯನಿಗೆ ತಾನು ಸೃಷ್ಟಿಸಿದೆಲ್ಲವನ್ನು ಕೊಟ್ಟನು. ಇಷ್ಟೆಲ್ಲಾ ಆದನಂತರ ದೇವರು ಪರಲೋಕದಿಂದ ಇಳಿದು ಬಂದು ಸುಂದರವಾದ ಏದೆನ್ ತೋಟದಲ್ಲಿ ಒಬ್ಬ ತಂದೆಯು ಮಗನೊಂದಿಗೆ ಓಡಾಡುವಂತೆಯೇ ಆದಾಮನೆಂಬ ಈ ಮನುಷ್ಯನ ಕೈಯನ್ನು ಹಿಡಿದುಕೊಂಡು ಓಡಾಡಿದನು. ಅವರು ಒಬ್ಬರೊಂದಿಗೆ ಒಬ್ಬರು ಮಾತಾಡಿದರು. ಅವರಿಬ್ಬರ ನಡುವೆ ಪರಸ್ಪರ ಪರಿಪೂರ್ಣವಾದ ಒಮ್ಮತವಿತ್ತು.

ವ್ಹಾ!...............ನಾನೊಬ್ಬ ವಿಡಿಯೋ ಗ್ರಾಫರ್ ಆಗಿದ್ದರೆ ಇದನ್ನು ಉತ್ತಮವಾಗಿ ಚಿತ್ರಿಕರಿಸಲಿಕ್ಕೆ ನನಗೆ ಸಾಧ್ಯವಾಗದೆ ಹೋದಿತು ನಾನು ಊಹಿಸುವುದಾದರೆ ಈ ಪ್ರೀತಿಯು ತಂದೆ ತಾಯಿಯ ಗಂಡ ಹೆಂಡತಿಯ, ಬಂಧು ಬಳಗದ, ಈ ಲೋಕದ ಪ್ರೀತಿಗಿಂತ ಮೀಗಿಲಾಗಿದೆ. ಆದರೆ ಮನುಷ್ಯನು ಪಾಪ ಮಾಡಿದಾಗ ದೇವರು ದು:ಖಿತನಾದನು. ಇದರ ಫಲಿತಾಂಶವಾಗಿ ರೋಗ, ದು:ಖ, ಯುದ್ಧಗಳು ಕೊನೆಗೆ ಮರಣವೂ ಸಹ ಲೋಕವನ್ನು ಪ್ರವೇಶಿಸಿಬಿಟ್ಟಿತು. ಇದರಿಂದ ದೇವರು ಮೊದಲು ಮನುಷ್ಯರೊಂದಿಗೆ ಸಂಚರಿಸುತ್ತಿದ್ದ ಹಾಗೆ, ಈಗ ಸಂಚರಿಸಲಾರದೆ ಹೋದರೂ ತನ್ನ ವರ್ತನೆಯಲ್ಲಿ ಎಂದಿಗೂ ಬದಲಾಗಲಿಲ್ಲ. ಮನುಷ್ಯನೊಂದಿಗೆ ತನ್ನ ಕೆಲಸವನ್ನು ಹಂಚಿಕೊಳ್ಳುವ ಇನ್ನೂ ಯೋಜಿಸಕೊಂಡೇ ಇದ್ದನು. ಆದಿ. 3:15ರ ಪ್ರಕಾರ ರಕ್ಷಕನ ಆಗಮನದ ಶುಭ ಸಮಾಚಾರವು ಈ ವಾಗ್ದಾನದ ಪೂರ್ತಿಕರಣವು ಕಾಲವು ಪರಿಪೂರ್ಣವಾದಗ ಯೋಹಾ. 3:16ರ ಪ್ರಕಾರ ಯೇಸುವನ್ನು ನಮ್ಮಲ್ಲಿಗೇ ಕಳುಹಿಸುವುದೇ ಆ ಯೋಜನೆಯಾಗಿತ್ತು.

ಮೊದಲನೇ ಆದಾಮನ ಅವಿಧೇಯತ್ವದ ಮೂಲಕ ಎಲ್ಲರೂ ಮರಣಕ್ಕೆ ಒಳಗಾಗಿ ನಿತ್ಯನಾಶನಕ್ಕೆ ಹೋಗುತ್ತಿರುವಾಗ ಎರಡನೇ ಆದಾಮನಾದ ಕರ್ತನಾದ ಯೇಸುಕ್ರಿಸ್ತನ ವಿಧೇಯತ್ವದ

ಜ್ಞಾನಿಗಳು ತೇಜೋಮಯವಾದ ಆಕಾಶಮಂಡಲದಂತೆ ಪ್ರಕಾಶಿಸುವರು (ದಾನಿ. 12:3).

ಮೂಲಕವಾಗಿ ಎಲ್ಲರಿಗೂ ನಿತ್ಯಜೀವಕ್ಕೆ ಬಾಧ್ಯರಾಗಬೇಕೆಂದು ಆತನನ್ನು ಕೊಟ್ಟನು (ರೋಮ. 5:12–21). ಈ ವೈಯಕ್ತಿಕ ಸೌವಾರ್ತಿಕತೆಯ ವಿಷಯದಲ್ಲಿ ದೇವರ ಹೃದಯಾಂತರಾಳದ ಸುಮಾದರಿಯನ್ನು ತೋರಿಸುತ್ತದೆ. ಆತನ ಪ್ರೀತಿಯು, ನಿನಗೂ ಎಲ್ಲಾ ಜನರಿಗೂ ಕೊಡುವಂತಹ, ಹಂಚಿಕೊಳ್ಳುವಂತಹ ಪ್ರೀತಿಯಾಗಿದೆ.

ಸಭೆಯಲ್ಲಿ ಕೆಲವು ನಿರ್ದಿಷ್ಟವಾದ ಸೇವಾ ಜವಾಬ್ದಾರಿಗಳು ಕೆಲವು ನಿರ್ದಿಷ್ಟ ಜನರಿಗೆ ಮಾತ್ರ ಕೊಡಲ್ಪಟ್ಟಿವೆ ಎಂಬುದು ಸತ್ಯ ಸಂಗತಿಯಾಗಿದೆ. (ಎಫೆ. 4:11 ಓದಿಕೊಳ್ಳಿರಿ). ಆದರೆ ವೈಯಕ್ತಿಕ ಸೌವಾರ್ತಿಕತೆ ಎನ್ನುವುದು ಪ್ರತಿಯೊಬ್ಬ ವಿಶ್ವಾಸಿಗೆ ಸೇರಿದ್ದಾಗಿದೆ. ನಾವು ಕ್ರಿಸ್ತನಲ್ಲಿ ಹೊಸದಾಗಿ ಹುಟ್ಟಿದ್ದೇವೆ. ಇನ್ನು ನಾವು ನಮ್ಮ ಸ್ವಂತ ಸೊತ್ತಲ್ಲ. ಆದ್ದರಿಂದ ಒಡೆಯನಾದ ನಮ್ಮ ಹೊಸ ಯಜಮಾನನಿಗೆ ಪರಿಪೂರ್ಣವಾಗಿ ಸೇವೆ ಸಲ್ಲಿಸೋಣ.

ಇದು ಕೇವಲ ಸೇವಕರಿಗೆ ಮಾತ್ರ ಸೀಮಿತವಾಗಿರುವುದಿಲ್ಲ ಅವರಿಗೆ ಅವರದೇ ಆದ ಜವಾಬ್ದಾರಿಗಳಿವೆ. ಸಭೆಯನ್ನು ದೇವರ ಮಾರ್ಗದರ್ಶನದಲ್ಲಿ ಮುಂದುವರಿಸಿಕೊಂಡು ಹೋಗುವಂಥದು ಅಷ್ಟು ಸುಲಭವಾದ ಕಾರ್ಯವಲ್ಲ. ಇವತ್ತು ಸಭೆಯ ಬೆನ್ನೆಲುಬಾಗಿ ಪ್ರಾರ್ಥನೆಯು ಅವಶ್ಯಕವಾಗಿದೆ. ಇದು ಸಭೆಯ ಅಂಗಗಳಾಗಿರುವ ಪ್ರತಿಯೊಬ್ಬರು ಸಭಾ ಅನ್ಯೋನ್ಯತೆಯಲ್ಲೂ, ಪ್ರಾರ್ಥನೆ, ಪರಿಶುದ್ಧತೆ, ಪರಿಶುದ್ಧಾತ್ಮನ ಸಹಭಾಗಿತ್ವದೊಡನೆ ಕೆಲಸಮಾಡಬೇಕಾಗಿದೆ.

ಇವತ್ತು ಕರ್ತನು ಪ್ರತಿದಿನ ಜನರ ಮಧ್ಯದಲ್ಲಿ ನಡೆದಾಡುವುದಕ್ಕಾಗಿ ಕಾಲುಗಳು ಬೇಕಾಗಿದೆ ಮತ್ತು ಜನರ ಮಧ್ಯದಲ್ಲಿ ಮಾತಾಡಲು ಬಾಯಿಗಳು ಬೇಕಾಗಿದೆ. ಇವತ್ತು ಸಮರ್ಪಿಸಿಕೊಡುವುದಾದರೆ ಅನೇಕ ಭಕ್ತರನ್ನು ಉಪಯೋಗಿಸಿದ ಹಾಗೆ ಕರ್ತನು ನಿಮ್ಮನ್ನು ಉಪಯೋಗಿಸಲು ಶಕ್ತನಾಗಿದ್ದಾನೆ.

ದೇವರಿಗೆ ಮುಚ್ಚಿರುವ ಪಾತ್ರೆಯಲ್ಲ, ಯಾವಾಗಲೂ ಸಿದ್ಧವಾಗಿರುವ ತೆರೆದ ಪಾತ್ರೆಯ ಅಗತ್ಯವಿದೆ. ಕರ್ತನು ಇಂಥಹ ಪಾತ್ರೆಯನ್ನು ತುಂಬಿಸಿ ಉಪಯೋಗಿಸಲು ಶಕ್ತನಾಗಿದ್ದಾನೆ. ಅದಕ್ಕಾಗಿ ಭಕ್ತನು ಈ ಪ್ರಕಾರವಾಗಿ ಹಾಡಿದ್ದಾನೆ.

ಕ್ರಿಸ್ತೇಸು ನಿನ್ನ ಮಾನಕ್ಕಾಗಿ
ನಾನೊಂದು ಪಾತ್ರೆ ಆಗಲಿ!
ನೀ ಮೆಚ್ಚುವಂಥ ಸೇವೆಗಾಗಿ
ನನ್ನನ್ನು ನಿನ್ನ ರಕ್ತದಿ
ವಿಶುದ್ಧಿ ಪಡಿಸ್ವೆ ಪವಿತ್ರ!
ಈಯ್ ನಿನ್ನ ದಾನ, ದಿವ್ಯ ಮಿತ್ರ!

ಕರ್ತನು ತಾನೇ ಚೀಯೋನಿನಿಂದ ಹೇರಳವಾಗಿ ನಿಮ್ಮನ್ನು ಆಶೀರ್ವದಿಸಲಿ.

## ಶೀಘ್ರದಲ್ಲೇ ಆರಂಭಿಸುವ ನಮ್ಮ ಹೊಸ ಯೋಜನೆಗಳು:

1. 50 ಬೆಡ್‌ನ ಆಸ್ಪತ್ರೆ
2. ಮದ್ಯವ್ಯಸನಿ ಪುನರ್‌ವಸತಿ ಕೇಂದ್ರ

**ನಾವು ಮಾಡುವ ಆಸ್ಪತ್ರೆ ಬಗ್ಗೆ ವಿವರಣೆ: ಈ ಎಲ್ಲಾ ಸೇವೆಗಳು ಅನಾಥರಿಗೆ, ನಿರ್ಗತಿಕರಿಗೆ, ಬಡವರಿಗೆ ಮಾತ್ರ.**

**ಈ ಯೋಜನೆಗಳಿಗಾಗಿ ಪ್ರಾರ್ಥನಾ ಮನವಿಗಳು :**

1) ಕಾಮಗಾರಿ ಕೆಲಸಗಳು ಒಳ್ಳೆಯ ರೀತಿಯಲ್ಲಿ ನಡೆಯುವುದಕ್ಕಾಗಿ ಪ್ರಾರ್ಥಿಸಿರಿ.
2) ನಂಬಿಗಸ್ತರಾದ ಮೇಸ್ತ್ರಿ ಹಾಗೂ ಇತರ ಕೆಲಸಗಾರರು ಸಿಗುವುದಕ್ಕಾಗಿ ಪ್ರಾರ್ಥಿಸಿರಿ.
3) ಈ ಯೋಜನೆಗಳನ್ನು ಆಶೀರ್ವದಿಸಲು ಪ್ರಾರ್ಥಿಸಿರಿ.
4) ಆರ್ಥಿಕ ನೆರವು ಒದಗಿ ಬರುವಂತೆ ಪ್ರಾರ್ಥಿಸಿರಿ.
5) ಈ ಯೋಜನೆಗೆ ಸರಕಾರದಿಂದ ಏನೆಲ್ಲಾ ಸವಲತ್ತುಗಳು ಹಾಗೂ ಅನುಮತಿ ಪತ್ರಗಳು ಸಿಗಬೇಕೋ ಅದು ಸಿಗುವುದಕ್ಕಾಗಿ ಪ್ರಾರ್ಥಿಸಿರಿ.
6) ಈ ಯೋಜನೆಯ ಪ್ರತಿಯೊಂದು ಕೆಲಸ ಕಾರ್ಯಗಳು ಯಾವುದೇ ತಡೆಯಿಲ್ಲದೇ ನಡೆಯುವಂತೆ ಪ್ರಾರ್ಥಿಸಿರಿ.
7) ಈ ಯೋಜನೆಯ ಮೂಲಕ ದೇವರ ಪರಿಶುದ್ಧವಾದ ನಾಮ ಮಹಿಮೆ ಹೊಂದುವುದಕ್ಕಾಗಿ ಪ್ರಾರ್ಥಿಸಿರಿ.

ಉದಯದಲ್ಲಿ ನನ್ನ ವಿಜ್ಞಾಪನೆಯು ನಿನ್ನ ಮುಂದೆ ಬರುವುದು (ಕೀರ್ತ. ೮೮:೧೩).

## ತಿಳುವಳಿಕೆಯ ಸ್ವರ

# ನಾವು ಯಾಕೆ ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು?

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಅಂತಿಯೋಕ್ಯ ಸಿರಿಯಾದಲ್ಲಿರುವ ಪಟ್ಟಣ. (ಅ.ಕೃ. 6:5, ಗಲಾ. 2:11).

- ಅಥೆನ್ಸ್: ಗ್ರೀಸಿನಲ್ಲಿರುವ ಪಟ್ಟಣ (ಅ.ಕೃ. 17:15).
- ಅಪಲೋನಿಯ : ಮೆಕದೋನಿಯದಲ್ಲಿರುವ ಪಟ್ಟಣ (ಅ.ಕೃ. 17:1).
- ಅಮ್ಮೋನ್: ಯೋರ್ದನಿನಲ್ಲಿರುವ ಪ್ರಾಂತ (ಆದಿ. 19:38).
- ಅರ್ಮಗೆದ್ದೋನ್ : ಭವಿಷ್ಯದ ಯುದ್ಧ ಕೇಂದ್ರ, ಮಗಿದ್ದೋವಿನ ಪರ್ವತ (ಪ್ರಕ. 16:16).
- ಅರೇಬಿಯಾ ಅರೆಬಿಯನ್ ದ್ವೀಪ ಮತ್ತು ಸಿರಿಯದ ಮರುಭೂಮಿ (ಗಲಾ. 1:17).
- ಅದುಲ್ಲಾಮ ಯೆಹೂದದಲ್ಲಿರುವ ಪಟ್ಟಣ ಆದಿ. 38:1.
- ಅಸ್ಸೀರಿಯಾ ಉತ್ತರ ಮೆಸಪತೋಮಿಯದಲ್ಲಿರುವ ಪಟ್ಟಣ (2 ಅರ. 15:19).
- ಅಷ್ಕೆಲೋನ್ ಫಿಲಿಷ್ಟಿಯ ಕರಾವಳಿಯಲ್ಲಿರುವ ಪಟ್ಟಣ ಯೆಹೋ. 13:3, ಯೆರೆ. 47:5.
- ಅಷ್ಡೋದ್ ಫಿಲಿಷ್ಟಿಯ ಕರಾವಳಿಯಲ್ಲಿರುವ ಪಟ್ಟಣ ಯೆಹೋ. 11:22, ಯೆಶಾ. 20:1
- ಇಕೋನ್ಯ ಮಧ್ಯ ಚಿಕ್ಕ ಏಷ್ಯಾದಲ್ಲಿರುವ ಪಟ್ಟಣ (2 ತಿಮೊ. 3:11).
- ಇಟಲಿ ದಕ್ಷಿಣ ಯುರೋಪಿನಲ್ಲಿರುವ ಪ್ರಾಂತ (ಅ.ಕೃ. 18:2).
- ಇಥಿಯೋಪಿಯ ಈಶಾನ್ಯ ಆಫ್ರಿಕದಲ್ಲಿರುವ ಪ್ರಾಂತ (ಎಸ್ತೇ. 1:1).
- ಇಸ್ರಾಯೇಲ್ 12 ಕುಲಗಳು ನೆಲೆಸಿರುವ ಪ್ರದೇಶ (2 ಸಮು. 2:9).
- ಈಜಿಪ್ಟ್ ಪುರಾತನ ರಾಜ್ಯ, ಆಫ್ರಿಕದ ನವೀನ ಗಣರಾಜ್ಯ ಆದಿ. 12:11
- ಊರ್ ದಕ್ಷಿಣ ಬಾಬಿಲೋನಿಯದಲ್ಲಿರುವ ಪಟ್ಟಣ ಆದಿ. 11:28
- ಎಫೆಸ ಚಿಕ್ಕ ಏಷ್ಯಾದ ಪಶ್ಚಿಮಕ್ಕಿರುವ ಬಂದರು. ಅ.ಕೃ. 18:21.
- ಎದೋಮ್ ಮೃತ್ಯು ಸಮುದ್ರದ ದಕ್ಷಿಣಕ್ಕಿರುವ ಪ್ರಾಂತ ಆದಿ. 32:3, ವಿಮೋ. 15:15.
- ಎಫ್ರಾಯೀಮ್ ಮಧ್ಯ ಪಾಲೆಸ್ತೀನಿನ ಪ್ರಾಂತ. ಧರ್ಮೋ. 34:2
- ಎಮ್ಮಾಹು ವಾಯುವು ಯೆರೂಸಲೇಮಿನ ಪಟ್ಟಣ. (ಲೂಕ. 24:13).
- ಎಲೀಮ್ ವಿಮೋಚನಾಕಾಲದ ಮಾರ್ಗದಲ್ಲಿದ್ದ ಪಟ್ಟಣ ವಿಮೋ. 15:27
- ಕಪೆರ್ನವುಮ್ ಗಲಿಲಾಯ ಸಮುದ್ರದ ಬಳಿ ಇರುವ ಪಟ್ಟಣ ಮತ್ತಾ. 4:13, ಲೂಕ. 7:1
- ಕಪ್ಪದೋಕಿಯ ಚಿಕ್ಕ ಏಷ್ಯಾದ ಮಧ್ಯದಲ್ಲಿರುವ ಪ್ರಾಂತ. ಅ.ಕೃ. 2:9
- ಕಾದೇಶ್ ಬಾರ್ನಿಯ ನೆಗೆಬ್ ಮರುಭೂಮಿಯಲ್ಲಿನ ಒಂದು ಪಟ್ಟಣ ಅರ. 32:8, ಧರ್ಮೋ. 1:2
- ಕಾನಾ ನಜರೇತಿನ ಹತ್ತಿರುವಿರುವ ಪಟ್ಟಣ ಯೋಹಾ. 2:1
- ಕಾನನ್ ಪಾಲೆಸ್ತೀನ್ ಅದರ ಇನ್ನೊಂದು ಹೆಸರು ಆದಿ. 17:1.
- ಕೆಂಪು ಸಮುದ್ರ ಈಜಿಪ್ಟಿನ ಪೂರ್ವ ಸೀಮೆಯಲ್ಲಿರುವ ಸಮುದ್ರ ವಿಮೋ. 10:19
- ಕೊರಿಂಥ ಗ್ರೀಸಿನ ದೊಡ್ಡ ಪಟ್ಟಣ ಅ.ಕೃ. 18:1
- ಕೊಲೊಸ್ಸೆ ಪುರ್ಗ್ಯದ ಪಟ್ಟಣ ಕೊಲೊ. 1:2
- ಕ್ರೇತ್ಯ ಮೆಡಿಟರೇನಿಯನ್‌ನಲ್ಲಿರುವ ದ್ವೀಪ ಅ.ಕೃ. 2:11 ತೀತ. 1:5
- ಗತ್ ದಕ್ಷಿಣ ಪಾಲೆಸ್ತೀನಲ್ಲಿರುವ ಪಾಲೆಸ್ತೀನನ ಪಟ್ಟಣ ಯೆಹೋ. 11:22
- ಗಲಾತ್ಯ ಉತ್ತರ ಮಧ್ಯ ಚಿಕ್ಕ ಏಷ್ಯಾ ಪ್ರಾಂತ. ಗಲಾ. 1:1
- ಗಲಿಲಾಯ ಉತ್ತರ ಪಾಲೆಸ್ತೀನ್‌ನಲ್ಲಿರುವ ದೊಡ್ಡ ಸರೋವರ ಮತ್ತಾ. 4:8
- ಗಾಜಾ ದಕ್ಷಿಣ ಪಾಲೆಸ್ತೀನ್ ಕರಾವಳಿಯ ಒಂದು ಪಟ್ಟಣ ಆದಿ. 10:19, 1 ಅರ. 4:24
- ಗಿಬೆಯ ಬೆಂಜಮಿನ್‌ನಲ್ಲಿರವ ಪಟ್ಟಣ ಯೆಹೋ. 18:28, 1 ಸಮು 10:2
- ಗಿಬ್ಯೋನ್ ಬೆಂಜಮಿನ್‌ನಲ್ಲಿರುವ ಪಟ್ಟಣ ಯೆಹೋ. 9:3 2 ಸಮು. 2:12
- ಗಿಲ್ಗಾಲ್ ಪೂರ್ವ ಯೆರಿಕೋವಿನ ಸ್ಥಳ ಯೆಹೋ. 4:19
- ಗಿಲ್ಯಾದ್ ಯೋರ್ದನಿನ ಪ್ರಾಂತ ಆದಿ. 31:21
- ಗ್ರೀಸ್ ಪುರಾತನ ರಾಜ್ಯ ಇಂದು ಟರ್ಕಿಯ ನೆರೆ ರಾಷ್ಟ್ರ. ದಾನಿ. 8:21, ಅ.ಕೃ. 20:2
- ಗೆರಿಜಿಮ್ ಪರ್ವತ ಸೆಚೆಮಿನ ಹತ್ತಿರವಿರುವ ಪರ್ವತ ಧರ್ಮೋ. 11:29, ಯೆಹೋ. 8:33.

ಮುಂದುವರಿಯುವದು.....

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ನನ್ನ ರಕ್ಷಣೆಗೂ ಮಾನಕ್ಕೂ ದೇವರೇ ಆಧಾರ (ಕೀರ್ತ. 62:7).

# ಪ್ರೊಫೆಸರ್ ವಿಲಿಯಂ ಕೇರಿ

ಲಾರ್ಡ್ ವೆಲ್ಲೆಸ್ಲಿಯೂ, ವಿಲಿಯಂ ಕೇರಿಯೂ ಸಮಾನಾಂತರ ವಯಸ್ಕರಾಗಿದ್ದರು. ಕೇರಿ ಒಬ್ಬ ಚಮ್ಮಾರನಾಗಿ ಯಾವದೋ ಒಂದು ಸ್ಥಳದಲ್ಲಿ ಕೆಲಸ ಮಾಡುತ್ತಿದ್ದರೆ, ವೆಲ್ಲೆಸ್ಲಿಯು ಈಟನ್, ಕ್ರೈಸ್ಟ್ ಚರ್ಚ್ ಮತ್ತು ಆಕ್ಸ್‌ಫರ್ಡ್‌ನಲ್ಲಿ ಇದ್ದನು. ಕೇರಿ ಕಲ್ಕತ್ತದಲ್ಲಿ ಹಸಿವಿನಿಂದ ಇರುವಾಗ ವೆಲ್ಲೆಸ್ಲಿಯಾದರೋ ಹೌಸ್ ಆಫ್ ಕಾಮರ್ಸ್‌ನಲ್ಲಿ ಐಶಾರಾಮದ ಜೀವನ ನಡೆಸುತ್ತಿದ್ದನು. ಲಾರ್ಡ್ ವೆಲ್ಲೆಸ್ಲಿಯು 1798ರಲ್ಲಿ ಕಲ್ಕತ್ತಕ್ಕೆ ಬಂದು ಇಳಿದನು.

ವೆಲ್ಲೆಸ್ಲಿ ಕಲ್ಕತ್ತಾಗೆ ಬಂದಾಗ, ಕಂಪನಿಯ ಕಾರಕೂನರ ಸ್ಥಿತಿಯನ್ನು ನೋಡಿ ದಿಗ್ಭ್ರಮೆಗೊಂಡನು. ಭಾನುವಾರ ಕುದುರೆ ಓಟದ ಪದ್ಯ, ಜೂಜು ಇವುಗಳಿಗೆ ಮೀಸಲಾಗಿತ್ತು. ಆಗ ತಾನೆ ಇಂಗ್ಲೀಷ್ ಪಬ್ಲಿಕ್ ಸ್ಕೂಲ್‌ನಿಂದ ಹೊರಗೆ ಬಂದ ಹದಿನಾರರ ಯುವಕರು, ನ್ಯಾಯಾಧೀಶರಾಗಿ, ಮ್ಯಾಜಿಸ್ಟ್ರೇಟರುಗಳಾಗಿ, ರೆವೆನ್ಯೂ ಕಲೆಕ್ಟರ್‌ಗಳಾಗಿ, ಸಾವಿರಾರು ಸ್ಥಳೀಯರ ಮೇಲೆ ಗೌವರ್ನರ್‌ಗಳಾಗಿ ಕೆಲಸ ನಿರ್ವಹಿಸುತ್ತಿದ್ದರು. ತಮ್ಮ ಭಾವನೆಗಳನ್ನು ಆಶೆಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ತಮ್ಮನ್ನು ತಾವು ತರಬೇತು ಪಡಿಸಿಕೊಳ್ಳಬೇಕಾಗುವದು ದೊಡ್ಡ ಮೊತ್ತದ ಆದಾಯವನ್ನು ಪಡೆಯುತ್ತಾ ಸ್ಥಳೀಯ ಕೆಳವರ್ಗದ ನೌಕರರಿಂದ ಹೊಗಳಿಕೆಗೆ ಪಾತ್ರರಾಗಿದ್ದರು. ಇದೆಲ್ಲವೂ ಕಂಪನಿಯ ಅಳಿವಿಗೆ ಕಾರಣವೆಂದು ಲಾರ್ಡ್‌ವೆಲ್ಲೆಸ್ಲಿ ಮನಗಂಡನು. ಕಂಪನಿಯ ಆಡಳಿತಗಾರರು, ತಮ್ಮ ಕೆಲಸವನ್ನು ಪ್ರಾರಂಭಿಸುವ ಮೊದಲು ಮೂರು ವರ್ಷಗಳ ಕಾಲ ವ್ಯಾಸಂಗ ಮಾಡಬೇಕೆಂದು ನಿರ್ಧರಿಸಿದನು.

"ಪೋರ್ಟ್ ವಿಲಿಯಂ" ಎಂಬ ಹೆಸರಿನ ಕಾಲೇಜನ್ನು ಪ್ರಾರಂಭಿಸಿದನು. ಬಹಳ ವ್ಯವಸ್ಥಿತ ರೀತಿಯಲ್ಲಿ ನಡೆಯುವಂತೆ, ಒಳ್ಳೆಯ ವಿದ್ಯಾಭ್ಯಾಸ ದೊರಕುವಂತೆ, ಉತ್ತಮವಾದ ಪ್ರಾಧ್ಯಾಪಕರುಗಳನ್ನು ಆರಿಸಿದನು. ವಿಶ್ವವಿದ್ಯಾಲಯವನ್ನೇ ಕಾಣದಂಥಹ, ಈಟನ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳ ಹೆಸರುಗಳನ್ನು ಮಾತ್ರ ಕೇಳಿದ್ದಂಥಹ, ಗ್ರಂಥಾಲಯಗಳನ್ನು ಪ್ರವೇಶಿಸದೇ ಇದ್ದಂಥಹ, ಚಮ್ಮಾರನಾಗಿದ್ದ ಕೇರಿಯನ್ನು ಬಂಗಾಳಿ ಮತ್ತು ಸಂಸ್ಕೃತ ಭಾಷೆಗಳ ಪ್ರಾಧ್ಯಾಪಕ ವೃತ್ತಿಗೆ ಆಹ್ವಾನಿಸಲಾಯಿತು. ತನ್ನ ಪ್ರಧಾನರನ್ನು ಇಷ್ಟಾನುಸಾರವಾಗಿ ಬಂಧಿಸುವದಕ್ಕೂ, ತನ್ನ ಮಂತ್ರಿಗಳಿಗೆ ಬುದ್ಧಿಕಲಿಸುವದಕ್ಕೂ ಅಧಿಕಾರ ಕೊಟ್ಟನು (ಕೀರ್ತ. 105:22). ಎಂದು ಸತ್ಯವೇದದಲ್ಲಿ ಹೇಳಿದಂತೆ, ಮುಂದಿನ ಭಾರತದ ಆಡಳಿತಗಾರರಿಗೆ ಶಿಕ್ಷಣ ನೀಡುವಂತೆ ಒಬ್ಬ ಚಮ್ಮಾರನು ಆರಿಸಲ್ಪಟ್ಟನು.

ವಿಲಿಯಂ ಕೇರಿ, ಈ ಆಹ್ವಾನವನ್ನು ತನ್ನ ಮಿಶನರಿ ಕಾರ್ಯಕ್ಕೆ ಈ ವೃತ್ತಿಯಿಂದ ಯಾವುದೇ ತೊಂದರೆ ಉಂಟಾಗಬಾರದೆಂಬ ಶರತ್ತಿನೊಂದಿಗೆ ಒಪ್ಪಿಕೊಂಡನು. ಈ ವೃತ್ತಿಗೆ ನೇಮಕವಾದಾಗ ಅವನ ಜವಾಬ್ದಾರಿ ಅಧಿಕವಾಗಿತ್ತು. ಪುಸ್ತಕಗಳಿರಲಿಲ್ಲ. ಸರಿಯಾದ ಸವಲತ್ತುಗಳು ಇರಲಿಲ್ಲ. ಪಠ್ಯ ಪುಸ್ತಕಗಳು ವ್ಯಾಕರಣ ಪುಸ್ತಕಗಳು, ನಿಘಂಟುಗಳು ಸಂಗ್ರಹಿಸಲ್ಪಟ್ಟು ಮುದ್ರಣಗೊಂಡವು. ಕೇರಿ, ಮೂಲ ಹಿಂದೂ ಶಾಸ್ತ್ರಗಳನ್ನು, ರಾಮಾಯಣ, ಮಹಾಭಾರತಗಳನ್ನು ಓದಿದನು. ರಾಮಾಯಣ ಮಹಾಭಾರತಗಳನ್ನು ಬಂಗಾಳಿ ಭಾಷೆಗೆ ಭಾಷಾಂತರಿಸಿದನು. ಕೇರಿಯು ಬಿಡುಗಡೆ ಮಾಡಿದ ಸಂಸ್ಕೃತದಲ್ಲಿ ರಾಮಾಯಣ ಮಹಾಭಾರತ ವಿವರಣಾ ಟಿಪ್ಪಣಿಯೊಂದಿಗೆ ಸೆರಾಂಪುರ ಮುದ್ರಣಾಲಯದಲ್ಲಿ ಪ್ರಕಟಗೊಂಡಿತು.

ಕೇರಿ 1831ರವರೆಗೂ "ಪೋರ್ಟ್ ವಿಲಿಯಂ ಕಾಲೇಜ್"ನಲ್ಲಿ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದನು. ಸ್ಥಳೀಯ ವಿದ್ವಾಂಸರಿಂದ ಇವನು ಬಹಳವಾಗಿ ಆಕರ್ಷಿಸಲ್ಪಟ್ಟಿದ್ದನು. ಮುಖ್ಯಸ್ಥಾನವನ್ನು ಗಳಿಸಿದ್ದನು. ಆ ಮೂವತ್ತು ವರ್ಷಗಳ ಪ್ರಾಧ್ಯಾಪಕ ಸೇವೆಯಲ್ಲಿ ಅನೇಕ ಸಿವಿಲ್ ಸರ್ವೀಸ್ ಅಧಿಕಾರಿಗಳು ಕೇರಿಯ ಬಳಿ ವಿದ್ಯಾಭ್ಯಾಸ ಮಾಡಿದ್ದು ಮಾತ್ರವಲ್ಲ. ಸ್ಥಳೀಯರೊಂದಿಗೆ ಕರುಣೆಯಿಂದ ನಡೆದುಕೊಳ್ಳುವುದನ್ನು ಕಲಿತುಕೊಂಡರು. ಕಾಲೇಜಿನ ವೇಳೆಯ ನಂತರ ಮಿಷನರಿ ಪ್ರೊಪೆಸರ್, ಸಾಯಂಕಾಲದ ವೇಳೆಗಳಲ್ಲಿ ಬಂಗಾಳಿಯಲ್ಲಿ ಪ್ರವಚನ ಮಾಡುತ್ತಿದ್ದನು. ಸೆರೆಮನೆಗಳಲ್ಲಿ ಸಂಧಿಸುತ್ತಿದ್ದನು, ಬ್ರಿಟಿಷ್ ಸೈನಿಕರೊಂದಿಗೆ ಮಾತಾಡುತ್ತಿದ್ದನು. ವಾರದಲ್ಲಿ ನಾಲ್ಕು ದಿನಗಳು ಕಲ್ಕತ್ತದಲ್ಲಿ ಕೆಲಸ ಮುಗಿದ ನಂತರ ಸೆರಾಂಪುರಕ್ಕೆ ಹಿಂದಿರುಗುತ್ತಿದ್ದನು. ವಾರದ ಉಳಿದ ದಿನಗಳಲ್ಲಿ ಸ್ಥಳೀಯ ಭಾಷೆಗಳಿಗೆ ಸತ್ಯವೇದವನ್ನು ಭಾಷಾಂತರಿಸುತ್ತಿದ್ದನು. ಕೆಲಸದ ದಿನದ ಮೂರನೇ ಒಂದು ಭಾಗವನ್ನು ಸಂಸ್ಕೃತವನ್ನು ಅಭ್ಯಾಸ ಮಾಡಲು ಉಪಯೋಗಿಸುತ್ತಿದ್ದನು. ಮಧ್ಯಾಹ್ನದಲ್ಲಿ ಓದಲು, ಬರೆಯಲು ಸಂಸ್ಕೃತವನ್ನು ಕಲಿಯಲು ಕಾಲವನ್ನು ವಿನಿಯೋಗಿಸುತ್ತಿದ್ದನು. ಸಾಯಂಕಾಲದಲ್ಲಿ ಸತ್ಯವೇದದ ತರ್ಜುಮೆ ಮಾಡುತ್ತಿದ್ದನು.

ದೇವರ ವಾಕ್ಯದ ಬಲವನ್ನೂ ಮಹಿಮೆಯನ್ನೂ ಅರಿತುಕೊಂಡ ದಿನದಿಂದ, ಪ್ರತಿ ದಿನ ಹೊತ್ತಾರೆಯಲ್ಲಿ ಸತ್ಯವೇದದ ಒಂದು ಅಧ್ಯಾಯವನ್ನು ಮೊದಲು ಆಂಗ್ಲಭಾಷೆಯಲ್ಲಿಯೂ ನಂತರ ತಾನೇ ಸ್ವತ: ಕಲಿತ ಇತರ ಆರು ಭಾಷೆಗಳಲ್ಲಿ ಓದುತ್ತಿದ್ದನು. 1803ರಲ್ಲಿ ಬಂಗಾಳಿ ಭಾಷೆಯನ್ನು ಕಲಿತಂದಿನಿಂದ ಭಾರತದ ಮತ್ತು ಪೂರ್ವ ಆಸ್ಯ ಸೀಮೆಗಳ ಪ್ರಮುಖ ಭಾಷೆಗಳಲ್ಲಿ ಸತ್ಯವೇದವನ್ನು ತರ್ಜುಮೆ ಮಾಡಬೇಕೆಂಬ ಹಂಬಲ ಅವನನ್ನು ಆವರಿಸಿಕೊಂಡಿತು. ಕೇರಿ ಪ್ರವಚನ ಮಾಡಿದನು, ಕಲಿಸಿದನು, ಆದರೆ ಅವನ ಜೀವಿತದ ಹೆಚ್ಚಿನ ಭಾಗವು ಸತ್ಯವೇದವನ್ನು ಅಂದರೆ ದೈವೀಕ ಸಂದೇಶವನ್ನು ಎಲ್ಲಾ ಜನರಿಗೆ ಅವರದೇ ಆದ ಭಾಷೆಗಳಲ್ಲಿ ತರ್ಜುಮೆ ಮಾಡುವದರಲ್ಲಿ ವಿನಿಯೋಗವಾಯಿತು. ಒಮ್ಮೆ ಎಲ್ಲಾ ಮೂಲ ಪ್ರತಿಗಳು ಸುಟ್ಟು ಹೋದಾಗ, ಕೇರಿ ಪುನ: ಅವುಗಳನ್ನೆಲ್ಲಾ ಬರೆದನು, ನಾಲ್ವತ್ತು ಭಾಷೆಗಳಲ್ಲಿ ಭಾಗವಾಗಿಯೋ ಅಥವಾ ಪೂರ್ತಿಯಾಗಿಯೂ ಸತ್ಯವೇದವು ಭಾಷಾಂತರಗೊಳ್ಳಲು ಕೇರಿ ಸಾಧನವಾದನು. ಬಂಗಾಳಿ, ಹಿಂದಿ, ಮರಾಠಿ ಮತ್ತು ಸಂಸ್ಕೃತ ಭಾಷಾಂತರಗಳು

ನೀತಿವಂತರಾದರೋ ದೇವರ ಸನ್ನಿಧಿಯಲ್ಲಿ ಹರ್ಷಿಸುವರು (ಕೀರ್ತ. 68:3).

ಅವನಿಂದ ತರ್ಜುಮೆ ಆದವು. ಚೀನಾ ಭಾಷೆಯ ತರ್ಜುಮೆ ಮಾರ್ಷ್‌ಮ್ಯಾನ್‌ನ ಕಾರ್ಯ. ಕೋಟ್ಯಾನುಕೋಟಿ ಜನರಿಗೆ ದೇವರ ವಾಕ್ಯವನ್ನು ನೀಡುವದರಲ್ಲಿ ಕೇರಿ ಎಡಬಿಡದೆ ಪ್ರಯಾಸಪಟ್ಟನು.

1904ರಲ್ಲಿ "ಬ್ರಿಟಿಷ್ ಮತ್ತು ವಿದೇಶಿ ಸತ್ಯವೇದ ಸಂಸ್ಥೆ" ಶತಮಾನೋತ್ಸವದ ಸಂದರ್ಭದಲ್ಲಿ ಭಾಷಾಶಾಸ್ತ್ರ ನಿರೀಕ್ಷಕರಾದ ಜಾರ್ಜ್‌ಗ್ರೀರ್‌ಸನ್ ಎಂಬವರು, "ಸೆರಾಂಪುರದ ಹೃದಯವಂತಿಕೆಯುಳ್ಳ ಮಿಷನರಿ ಸಮೂಹದಿಂದ ಸತ್ಯವೇದವು ನಾಲ್ವತ್ತು ಭಾಷೆಗಳಲ್ಲಿ ತರ್ಜುಮೆಗೊಂಡಿದೆ. ಅದಕ್ಕೆ ಮೊದಲು ಭಾರತೀಯ ಭಾಷೆಯಲ್ಲಿನ ಸತ್ಯವೇದ ಬೆರಳೆಣಿಕೆಯಷ್ಟು ಮಾತ್ರ ಇದ್ದಿತು. ಸೆರಾಂಪುರದ ಭಾಷಾಂತರಕಾರರ ಮೊದಲ ಪ್ರಯತ್ನದ ನಂತರ ಉತ್ತಮ ಕೃತಿ ಬಂದಿವೆ, ಆದರೆ ಮೊದಲ ಹೆಜ್ಜೆ ಬಹು ಪ್ರಾಮುಖ್ಯವಾದದ್ದು. ಅದನ್ನ ಕೇರಿ ಮತ್ತು ಆತನ ಸಹೋದರರು ಮಾಡಿದ್ದಾರೆ" ಎಂದು ಹೇಳಿದರು.

ಇವರು ಸತ್ಯವೇದವನ್ನು ಇಷ್ಟು ಭಾಷೆಗಳಲ್ಲಿ ತರ್ಜುಮೆ ಮಾಡಲು ಹೇಗೆ ಸಾಧ್ಯವಾಯಿತು? ದೈವೀಕ ಜ್ಞಾನ ಮತ್ತು ಅವರ ಪರಿಶ್ರಮದಿಂದಲೇ ವಿಲಿಯಂ ಕೇರಿ ಮತ್ತು ಆತನ ಸಂಗಡಿಗರು ಭಾಷೆಯನ್ನು ಅದರ ವ್ಯಾಕರಣವನ್ನು ಅಧ್ಯಯನ ಮಾಡಿದ್ದರು. ಪ್ರತಿ ಭಾಷೆಯಲ್ಲಿರುವ ನ್ಯೂನತೆಗಳನ್ನು ಮತ್ತು ಪ್ರತಿ ಭಾಷೆಯಲ್ಲಿರುವ ವೈಶಿಷ್ಟ್ಯತೆಗಳನ್ನು ಅಧ್ಯಯನ ಮಾಡಿದ್ದರು. 1811ರ ಕೊನೆಯಲ್ಲಿ ವಿಲಿಯಂ ಕೇರಿ ಸಂಸ್ಕೃತ, ಬಂಗಾಳಿ ಮತ್ತು ಮರಾಠಿ ಭಾಷೆಗಳ ವ್ಯಾಕರಣವನ್ನು ಪ್ರಕಾಶನಗೊಳಿಸಿದನು. ತೆಲುಗು, ಕನ್ನಡ, ಒರಿಯಾ, ಪಂಜಾಬಿ, ಕಾಶ್ಮೀರಿ, ಗುಜರಾತಿ, ನೇಪಾಳಿ, ಅಸ್ಸಾಮಿ ಭಾಷೆಗಳ ವ್ಯಾಕರಣವನ್ನು ಅಧ್ಯಯನ ಮಾಡುತ್ತಿದ್ದನು.

1801 ಫೆಬ್ರವರಿ 7 ರಂದು ತರ್ಜುಮೆ ಬಂಗಾಳಿ ಭಾಷೆಯ ಹೊಸ ಒಡಂಬಡಿಕೆ ಮುಕ್ತಾಯಗೊಂಡಿತು. ಅದು ಸಿದ್ಧವಾದ ಮೇಲೆ ದೇವಾಲಯ ಪವಿತ್ರ ಭೋಜನದ ಮೇಜಿನ ಮೇಲೆ ಭಕ್ತಿಪೂರ್ವಕವಾಗಿ ದೇವರ ಸಮ್ಮುಖದಲ್ಲಿ ಅರ್ಪಿಸಲಾಯಿತು. ಮಂಡಲಿಯ ಕುಟುಂಬಗಳು ಮತ್ತು ಹೊಸದಾಗಿ ಮತಾಂತರಗೊಂಡವರು ಕೃಷ್ಣಪಾಲ್ ನೇತೃತ್ವದಲ್ಲಿ ಸೇರಿ ಕೃತಜ್ಞತಾ ಸ್ತೋತ್ರವನ್ನು ಸಮರ್ಪಿಸಿದರು. ಈ ಬಂಗಾಳಿ ಸತ್ಯವೇದವು ಕೇರಿಯ 15 ವರ್ಷಗಳ ಪರಿಶ್ರಮವಾಗಿದ್ದಿತು. ಆತನು ತನ್ನ ಸ್ವಂತ ಲೇಖನಿಯಿಂದ ಇಡೀ ಸತ್ಯವೇದವನ್ನು ಬರೆದಿದ್ದನು.

ಹದಿನೇಳು ವರ್ಷಗಳ ನಂತರ, ಮಂಡಲಿಯು ಹಳೇ ರಾಜಧಾನಿಯಾದ ಡಾಕಾಗೆ ವಿಸ್ತರಿಸಿದಾಗ, ವಿಗ್ರಹಾರಾಧನೆಯನ್ನು ತೊರೆದ ಹಿಂದೂ ರೈತರುಗಳಿದ್ದ ಅನೇಕ ಹಳ್ಳಿಗಳು ಕಂಡು ಬಂದವು. ಇವರು ತಮ್ಮ ಹೊಸ ಧರ್ಮವನ್ನು ಒಂದು ಹಳೆಯ ಮರದ ಪೆಟ್ಟಿಗೆ ಒಂದರಲ್ಲಿ ಇಟ್ಟಿದ್ದ ಹರಿದುಹೋದ ಪುಸ್ತಕದಿಂದ ಕಂಡುಕೊಂಡಿದ್ದರು. ಅದು ಎಲ್ಲಿಂದ ಬಂದಿತೆಂದು ಯಾರಿಗೂ ತಿಳಿದಿರಲಿಲ್ಲ. ಕೇರಿಯ ಬಂಗಾಳಿ ಭಾಷೆಯಲ್ಲಿ ಬರೆದ "ರಕ್ಷಕನೂ ಕರ್ತನು ಆದ ಯೇಸುಕ್ರಿಸ್ತನ" ಹೊಸ ಒಡಂಬಡಿಕೆ ಅದಾಗಿತ್ತು.

ಕೇರಿ, ಸಂಸ್ಕೃತದಲ್ಲಿಯೂ ಭಾಷಾಂತರ ಮಾಡಿದನು. ಬ್ರಾಹ್ಮಣರು ಇದನ್ನು ಸಂತೋಷದಿಂದ ಸ್ವೀಕರಿಸಿದನು. 1812ರಲ್ಲಿ ಬೆಂಕಿಯಿಂದ ನಾಶವಾದ ಹಳೆಒಡಂಬಡಿಕೆಯ ಚಾರಿತ್ರಿಕ ಪುಸ್ತಕಗಳು 1815ರಲ್ಲಿ ಪುನ: ಕಾಣಿಸಿಕೊಂಡವು. 1827ರಲ್ಲಿ ಪೂರ್ಣವಾದ ಮೊದಲನೆ ಹೊತ್ತಿಗೆ ಹೊರ ಬಂದಿತು. ಕೇರಿ ಮರಾಠಿ ಭಾಷೆಯಲ್ಲಿಯೂ ತರ್ಜುಮೆ ಮಾಡುತ್ತಿದ್ದನು. 1811ರಲ್ಲಿ ಹೊಸ ಒಡಂಬಡಿಕೆಯು ಹೊರಬಂದಿತು ಮತ್ತು 1820ರಲ್ಲಿ ಹಳೆ ಒಡಂಬಡಿಕೆಯು ಪ್ರಕಟವಾಯಿತು.

ಹಿಂದಿ ಭಾಷಾಂತರದಲ್ಲಿ ಕೇರಿ ಹೆಚ್ಚು ಆಸಕ್ತಿತೋರಿಸಿದನು. ಹೊಸ ಒಡಂಬಡಿಕೆ ಪೂರ್ಣಗೊಂಡು ಹೊರ ಬಂದಾಗ, ಸುವಾರ್ತೆಯು ಆನಂದ್ ಮಸಿಹ್ ಎಂಬ ಒಬ್ಬ ಬ್ರಾಹ್ಮಣ ಪುರೋಹಿತನನ್ನು ಕ್ರಿಸ್ತನ ಬಳಿಗೆ ನಡೆಸಿತು. ಈ ಭಾಷಾಂತರವನ್ನು ಕೇರಿ 1802–1807ರಲ್ಲಿ ತನ್ನ ಕೈಯಾರೆ ಮಾಡಿದ್ದನು.

ಪಂಜಾಬಿ ಸತ್ಯವೇದವು 1815ರಲ್ಲಿ ಪ್ರಕಟಗೊಂಡಿತು ಮತ್ತು 1807ರಲ್ಲಿ ಜನರಿಂದ ಮನ್ನಣೆ ಗಳಿಸಿತು. ಅಮೃತಸರ ಲಾಹೋರ್‌ಗಳಲ್ಲಿ "ಯೇಸುವಿನ ಪುಸಕ್ತವನ್ನು ಜನರು ಓದಿದರು. ಅದರ ಬಗ್ಗೆ ಮಾತನಾಡಲಾರಂಭಿಸಿದರು. ಜನರ ಮನಸ್ಸಿನಲ್ಲಿ ಜಿಜ್ಞಾಸೆ ಹುಟ್ಟಿಸಿತು" ಎಂದು ಕೇರಿ ವರದಿ ಮಾಡಿದ್ದನು. ಒಬ್ಬ ದರೋಡೆಕಾರನನ್ನು ನೀನು ಇಷ್ಟೊಂದು ಕೊಲೆಗಳನ್ನು ಮಾಡಲು ಹೇಗೆ ಸಾಧ್ಯವಾಯಿತು ಎಂದು ಕೇಳಲು ಅವನು ಸತ್ಯವೇದದ ಕಡೆಗೆ ಬೆಟ್ಟು ಮಾಡುತ್ತಾ "ಈ ಪುಸ್ತಕವನ್ನು ಓದಿದ್ದದ್ದರೆ ನಾನು ಹೀಗೆ ಮಾಡುತ್ತಿರಲಿಲ್ಲ" ಎಂದು ಹೇಳಿದನು. ಲೂದಿಯಾನದಿಂದ ನಲವತ್ತು ಮೈಲುಗಳ ದೂರದಲ್ಲಿದ್ದ ಒಬ್ಬ ಫಕೀರನು ಈ ಪುಸಕ್ತವನ್ನು ಓದಿ "ಸಾಚಿ ಪಿತೆ ಈಸಾ" ಎಂಬ ಆರಾಧನಾ ಸಂಘವನ್ನು ಸ್ಥಾಪಿಸಿದನು ಮತ್ತು ತನ್ನ ಸ್ಥಳೀಯ ರಾಜ್ಯದಲ್ಲಿ ಬಹಳ ಹಿಂಸೆಗೆ ಒಳಗಾದನು.

ಹರಿದ್ವಾರದಲ್ಲಿ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಕುಂಭಮೇಳದಲ್ಲಿ ಕೇರಿಯ ದಿನಗಳಲ್ಲಿ, ಮೂರು ಮಿಲಿಯನ್‌ಗೂ ಹೆಚ್ಚು ಜನರು ಕೂಡಿ ಬರುತ್ತಿದ್ದರು. ಮಿಷನರಿಗಳು ಈ ಸ್ಥಳವನ್ನು ತಮ್ಮ ಬೋಧನೆಯ ಮತ್ತು ಸತ್ಯವೇದ ಹಂಚಿಕೆಯ ಕೇಂದ್ರವನ್ನಾಗಿ ಮಾಡಿಕೊಂಡರು. ಇಲ್ಲಿ ಪಾಶ್ತೂನ್ ಭಾಷೆಯ ಸತ್ಯವೇದವನ್ನು ಒಬ್ಬ ಆಫ್ಘನ್ ಆಲಿಖಾನ್ ಎಂಬ ಕುದುರೆ ವ್ಯಾಪಾರಿಗೆ ಕೊಡಲಾಯಿತು. ಅವನು ಸತ್ಯವೇದವನ್ನು ಒಬ್ಬ ಮುಲ್ಲಾಗೆ ತೋರಿಸಲಾಗಿ ಅವನು ಹಳೆಯ ಒಡಂಬಡಿಕೆಯ ಭಾಗಗಳನ್ನು ಓದಿ ಮೋಶೆಯ ಮತ್ತು ನೋಹನ ಕಥೆಗಳು ಸತ್ಯವಾದ ಸಂಗತಿಗಳೆಂದು ಹೇಳಿದನು.

ಮರಣ ಮತ್ತು ಬೆಂಕಿ:– 1811–12 ಮರೆಯಲಾಗದ ದುರ್ಘಟನೆಗಳ ವರ್ಷವಾಗಿತ್ತು. ಮರಣವು ಏಳು ಮಿಷನರಿಗಳ ಮನೆಯನ್ನು ಪ್ರವೇಶಿಸಿ, ಹೆಂಡತಿಯನ್ನೋ ಅಥವಾ ಮೊಮ್ಮಕ್ಕಳನ್ನೋ ಬಲಿ ತೆಗೆದುಕೊಂಡಿತು. ಡಾ. ಕೇರಿಯ ಮೊಮ್ಮಗನೂ ಮರಣ ಹೊಂದಿದನು. 1812 ಮಾರ್ಚ್ 11ರಂದು ಸಂಜೆ ಸೆರಾಂಪುರದ ಮುದ್ರಣಾಲಯವು ಬೆಂಕಿ ಆಕಸ್ಮಿಕಕ್ಕೆ

ಯೆಹೋವನೇ, ನಿತ್ಯವೂ ನಿನ್ನ ಕೃಪಾತಿಶಯವನ್ನು ಹಾಡಿಹರಸುವೆನು (ಕೀರ್ತ. ೮೯:1).

ಒಳಗಾಯಿತು. ಆ ಸಮಯದಲ್ಲಿ ಮೇಲ್ವಿಚಾರಕನ ಹೊರತು ಯಾರೂ ಇರಲಿಲ್ಲ. ಇದ್ದಕ್ಕಿದಂತೆ 200 ಅಡಿ ಉದ್ದ 50 ಅಡಿ ಅಗಲವಿದ್ದ ಹಜಾರಕ್ಕೆ ಬೆಂಕಿ ಹತ್ತಿಕೊಂಡು ಉರಿಯಲಾರಂಭಿಸಿತು. ಮಧ್ಯರಾತ್ರಿಯ ವೇಳೆಗೆ ಮೇಲ್ಛಾವಣೆ ಕುಸಿಯಿತು.

ಮಾರ್ಷ್‌ಮ್ಯಾನ್ ತಾನೇ ಖುದ್ದಾಗಿ ಕಲ್ಕತ್ತಾಗೆ ಹೋಗಿ ಸಮಾಚಾರವನ್ನು ಕೇರಿಗೆ ತಿಳಿಸಿದನು. ಕೇರಿಗೆ ದೊಡ್ಡ ಆಘಾತವೇ ಉಂಟಾಗಿ ಅವನ ಕಣ್ಣುಗಳು ತುಂಬಿ ಬಂದವು. ಕೇರಿ ಮತ್ತು ಮ್ಯಾಷ್‌ಮನ್ ಅವರ ಸ್ನೇಹಿತ ಥಾಮ್ಸನ್‌ನನ್ನು ಸಂಧಿಸಿದರು. ಅವನು ದು:ಖದಿಂದ ಮುರಿಯಲ್ಪಟ್ಟನು.

ಅವರು ಮಧ್ಯಾಹ್ನ ಸೇರಾಂಪುರಕ್ಕೆ ಸೇರಿದಾಗ ಮೇಲ್ವಿಚಾರಕನಿಂದ 5 ದೊಡ್ಡ ಮುದ್ರಣ ಯಂತ್ರಗಳು ಯಾವ ಹಾನಿಗೂ ಒಳಗಾಗಲಿಲ್ಲವೆಂದು ತಿಳಿದು ಸಮಾಧಾನ ತಾಳಿದರು. ಈಗಾಗಲೇ ಅವರು ವಿಶಾಲವಾದ ದೊಡ್ಡ ಸ್ಥಳವನ್ನು ತಮ್ಮ ಕೆಲಸಕ್ಕಾಗಿ ಬಾಡಿಗೆಗೆ ಹಿಡಿದಿದ್ದರು. ಹೊಗೆ ತುಂಬಿದ ಆ ಸ್ಥಳದಲ್ಲಿ ಕೇರಿಯು ಹಾಳಾಗಿ ಉಳಿದಿದ್ದನ್ನು ಕಾಣಲು ನಡೆದನು. ಅವನ ಕಣ್ಣು ಕಂಬನಿ ಹರಿಸಿತು. ಈ ಬೆಂಕಿಯು ಕೇರಿಯ ಹಸ್ತ ಪ್ರತಿಗಳನ್ನು ಹತ್ತು ಸತ್ಯವೇದದ ಭಾಷಾಂತರಗಳನ್ನು ಸುಟ್ಟು ಹಾಕಿತ್ತು. ಮ್ಯಾಷ್‌ಮನ್ನ್‌ನೊಂದಿಗೆ ಸೇರಿ, ಕೇರಿ ಮಾಡಿದ್ದ ರಾಮಾಯಣ ಪ್ರತಿಯೂ ಸುಟ್ಟು ಹೋಗಿತ್ತು. ಅವನ ಬಾರಿ ಯೋಜನೆಗೆ ಬೇಕಾದ ಬಹು ಭಾಷಾ ಸಂಸ್ಕೃತಿ ನಿಘಂಟು ಮತ್ತು ಅದರೊಂದಿಗೆ ಹೆಚ್ಚು ಕಾಗದಗಳು, ಹದಿನಾಲ್ಕು ಪಾಶ್ಚಾತ್ಯ ರೀತಿಯ ಅಚ್ಚು ಮೊಳೆಗಳ ಸಮೂಹದೊಂದಿಗೆ, ಹೊಸದಾಗಿ ಬಂದಿದ್ದ ಗ್ರೀಕ್, ಹೀಬ್ರೂ, ಇಂಗ್ಲೀಷ್ ಅಚ್ಚು ಯಂತ್ರಗಳು ಅಮೂಲ್ಯವಾದ ನಿಘಂಟುಗಳು, ವ್ಯಾಕರಣ ಪುಸ್ತಕಗಳು, ಲೆಕ್ಕ ಪತ್ರದ ಪುಸ್ತಕಗಳು ಇವೆಲ್ಲಾ ಆಸ್ತಿಯೂ ಸುಟ್ಟು ಬೂದಿಯಾಯಿತು. "ಅನೇಕ ವರ್ಷಗಳ ಪರಿಶ್ರಮವನ್ನು ಒಂದು ಸಂಜೆಯ ಬೆಂಕಿ ಕಬಳಿಸಿತು. ಕರ್ತನ ಮಾರ್ಗಗಳನ್ನು ಯಾರು ಅರಿತಾರು. ದೇವರು ಈ ರೀತಿ ನನ್ನನ್ನು ಕೆಳಮಟ್ಟಕ್ಕೆ ಇಳಿಸಿದ್ದಾನೆ. ನನ್ನನ್ನು ದೀನತೆಯಿಂದಿರುವಂತೆ ರೂಪಿಸುವ ಹಕ್ಕು ಆತನಿಗೆ ಉಂಟು. ಆದ್ದರಿಂದ ಆತನ ಚಿತ್ತಕ್ಕೆ ನನ್ನನ್ನು ಒಪ್ಪಿಸುವೆನು" ಎಂದು ಕೇರಿ ಅಂದನು.

ತಾನು ಕಂಡದ್ದನ್ನು ಕುರಿತು ಥಾಮಾಸನ್ "ಇಂಥಾ ಸ್ಥಳದಲ್ಲಿ ಯಾರು ನಿಂತಾರು? ನೆಲದ ತುಂಬಾ ಅರ್ಧಬೆಂದ ಸಾಮಾಗ್ರಿಗಳೂ ಸುಟ್ಟ ಕಾಗದ ಪುಸ್ತಕಗಳು ಹರಡಿವೆ. ಕೆಲವೇ ತಿಂಗಳ ಹಿಂದೆ ಜೀವವಾರ್ತೆ ಮುದ್ರಿತವಾಗಿದ್ದಿತು. ಕೆಲವೇ ಗಂಟೆಗಳ ಹಿಂದೆ ನಗುತ್ತಿದ್ದ ಇವೆಲ್ಲವೂ ಇಂದು ಬೂದಿಯಾಗಿ, ಧೂಳಾಗಿ ಹೋಯಿತು" ಎಂದು ನೊಂದುಕೊಂಡನು. ದೇವರೇ ತನ್ನ ಯೋಜನೆಯನ್ನು ನಿರೂಪಿಸಬೇಕು. ಆತನು ಮಾಡಬಲ್ಲನು. ಕೇರಿ ತನ್ನ ಸಹೋದ್ಯೋಗಿಗಳಿಂದ ಸಂತೈಸಲ್ಪಟ್ಟನು. ಬೆಂಕಿಯು ಹಸ್ತಪ್ರತಿಗಳನ್ನು ಬೆರಳಚ್ಚು ಯಂತ್ರಗಳನ್ನು ಅದರ ಹಣವನ್ನೂ ಆಹುತಿ ತೆಗೆದುಕೊಂಡಿರಬಹುದು. ಆದರೆ ಅವರಲ್ಲಿದ್ದ ಧೈರ್ಯ ಹುಮ್ಮಸ್ಸು, ಆತ್ಮವಿಶ್ವಾಸವನ್ನು ಅದು ಮುಟ್ಟಲಾಗಲಿಲ್ಲ. ಪುನ: ಕೆಲಸವನ್ನು ಹೊಸದಾಗಿ ಪ್ರಾರಂಭಿಸಿದರು. "ದಿ ಫೇಮಸ್ ಪ್ರಸ್ ಆಫ್ ಸೆರಾಂಪುರ್" ಎಂಬ ಮುದ್ರಣಾಲಯವು ಪುನ: ಸ್ಥಾಪಿತವಾಯಿತು.

ಎರಡು ತಿಂಗಳಲ್ಲಿ ತಮಿಳು ಹೊಸ ಒಡಂಬಡಿಕೆಯನ್ನು ಸಿದ್ಧಪಡಿಸಿ ಚಂದಾದಾರರಿದ್ದ ಊರುಗಳಿಗೆ, ಸಭೆಗಳಿಗೆ ಕಳುಹಿಸಿಕೊಟ್ಟರು. ಒಂದು ತಿಂಗಳ ಕಾಲ ಇಡೀ ಸಂಸ್ಥೆ ಹಗಲು ರಾತ್ರಿ ಕೆಲಸ ಮಾಡಿತು. ಆರು ತಿಂಗಳಲ್ಲಿ ಸಂಸ್ಥೆಗಾಗಿದ್ದ ನಷ್ಟವನ್ನು ಸರಿಪಡಿಸಲಾಯಿತು. 1812ರಲ್ಲಿ ಬೆಂಕಿಯು ಅನಾಹುತ ಉಂಟಾಗಿದ್ದರೂ, ಸೆರಾಂಪುರ ಮುದ್ರಣಾಲಯ ಕೇರಿಯ ಜೀವಿತ ಕಾಲದಲ್ಲಿ 2,12,000 ಸುವಾರ್ತಾ ಪ್ರತಿಗಳನ್ನು ಬಿಡುಗಡೆ ಮಾಡಿತು.

ಸಂಗ್ರಹ.

**ಪ್ರಾರ್ಥನಾ ಮನವಿಗಳು**

- **ಭಾರತ ದೇಶದ ಪ್ರತಿಯೊಂದು ರಾಜ್ಯಗಳ ಹೆಸರನ್ನು ಹೇಳಿ ದೇಶದಲ್ಲಿ ಭಕ್ತಿ ಸಂಜೀವನ ಉಂಟಾಗುವಂತೆ ಸುವಾರ್ತೆಗಾಗಿ ಬಾಗಿಲುಗಳು ತೆರೆಯಲ್ಪಟ್ಟು ದೇಶದ ಸುಮಾರು 110 ಕೋಟಿ ಜನರು ರಕ್ಷಣೆ ಹೊಂದುವಂತೆ ಪ್ರಾರ್ಥಿಸೋಣ.**
- **ಈ ವರ್ಷ ಪೂರ್ತಿಯಾಗಿ ದೇಶದೆಲ್ಲೆಡೆ ನಡೆಯಲಿರುವ ಪ್ರತಿಯೊಂದು ಕೂಟಗಳು ಕರ್ತನಿಂದ ಆಶೀರ್ವದಿಸಲ್ಪಟ್ಟು ಆತ್ಮಗಳು ರಕ್ಷಣೆ ಹೊಂದುವಂತೆ, ಸ್ವಸ್ಥತೆಗಳು ಉಂಟಾಗುವಂತೆ ಕರ್ತನ ಕಾಯ್ದು ಕಾಪಾಡುವಿಕೆಗಾಗಿ ಪ್ರಾರ್ಥಿಸೋಣ.**
- **ಪ್ರಪಂಚದ ಪ್ರತಿಯೊಂದು ರಾಷ್ಟ್ರದ ನಾಯಕರುಗಳಿಗೆ ಕರ್ತನು ತಾಳ್ಮೆಯನ್ನು, ಜ್ಞಾನವನ್ನು, ಸಮಾಧಾನವನ್ನು ಕೊಟ್ಟು ಮಹಾಯುದ್ಧದ ಭೀತಿಗಳು ಉಂಟಾಗದಂತೆ, ಸ್ವಪ್ರತಿಷ್ಠೆಗಳನ್ನು ಬಿಟ್ಟು ವಿಶ್ವವು ಶಾಂತಿ ಸಮಾಧಾನದಲ್ಲಿ ನೆಲೆಸುವಂತೆ ಪ್ರಾರ್ಥಿಸಿರಿ.**
- **ಕರ್ನಾಟಕದ ಉಜ್ಜೀವನಕ್ಕಾಗಿ, ರಕ್ಷಣೆಗಾಗಿ, ಮತ್ತು ಪ್ರತಿಯೊಂದು ಸೇವಕರುಗಳಿಗಾಗಿ, ಸೇವೆಗಳಿಗಾಗಿ ಪ್ರಾರ್ಥಿಸಿರಿ.**
- **ಪ್ರತಿನಿತ್ಯವೂ ನಮ್ಮ ರಾಜ್ಯದ 30 ಜಿಲ್ಲೆಗಳ ಹೆಸರನ್ನು ಹೇಳಿ ಆತ್ಮಭಾರದಿಂದ ಪ್ರಾರ್ಥಿಸೋಣ**

ಯಾವಾಗಲೂ ನಿನ್ನ ನಾಮದಲ್ಲಿ ಆನಂದಿಸುತ್ತಾರೆ; ನಿನ್ನ ನೀತಿಯಿಂದ ಏಳಿಗೆಹೊಂದುತ್ತಾರೆ (ಕೀರ್ತ. 89:16).

ಕಳೆದ ಸಂಚಿಕೆಯಿಂದ ಮುಂದುವರಿದಿದೆ.......

## ಖರಾರಾಚೆಂ ಖಚಿತ್

ಮೆಮ್ರೆಚ್ಯಾ ಬಣಾಲಾಗಿಂ ಸರ್ವೆಸ್ಪರ್ ದೇವ್ ಆಬ್ರಾಹಾಮಾಕ್ ದಿಷ್ಟಿಕ್ ಪಡ್ಲೊ. ವಾತಾಚೆ ದಾವೆಕ್ ತಂಬಾಚ್ಯಾ ಸಾವ್ಳೆಕ್ ಬೊಸುನ್ ಆಸ್ತಾಂ ಆಬ್ರಹಾಮಾನ್ ತಕ್ಲಿ ಉಕ್ಲುನ್ ವಯ್ರ್ ಪಳೆತಾನಾ ತೇಗ್ ಜಣ್ ತಾಕಾ ದಿಷ್ಟಿಕ್ ಪಡ್ಲೆ. ಆಯಿಲ್ಲ್ಯಾಂಕ್ ಸ್ವಾಗತ್ ಕರ್ನ್ ಬೊಸುಂಕ್ ಸಾಂಗ್ಲೆಂ. ಆನಿಂ ಸರರಾಂ ಭಿತೆರ್ ಒಸುನ್ ಸಾರಾಲಾಗಿಂ ಜೆವ್ಣಾಚಿ ತಯಾರಾಯ್ ಕರುಂಕ್ ಸಾಂಗುನ್ ಉತ್ತಿಮ್ ಮಾಸ್ ಹಾಡ್ನ್ ದಿಲೆಂ. ಉಪ್ರಾಂತ್ ಆಯಿಲ್ಲೆ ತೇಗಯ್ ಜಣ್ ಧಾಧೊಶಿ ಜೆವ್ಲೆ.

ತಾಂಚೆ ಮದ್ಲ್ಯಾ ಸರ್ವೆಸ್ಪರ್ ದೇವಾನ್ "ತುಜಿ ಬಾಯ್ಲ್ ಸಾರಾ ಖಂಯ್ ಆಸಾ?" ಮ್ಹಣ್ ವಿಚಾರ್ಲೆಂ. ಆನಿಂ ಉಪ್ರಾಂತ್ ಮ್ಹಳೆಂ "ಘುಡ್ಲ್ಯಾ ವರ್ಸಾ ಚಡ್ಉಣೆಂ ಹ್ಯಾಚ್ಚ್ ವೆಳಾರ್ ತುಜಿ ಬಾಯ್ಲ್ ಎಕಾ ಚೆರ್ಕ್ಯಾ ಭುರ್ಗ್ಯಾಕ್ ಪ್ರಸುತ್ ಜಾತೆಲಿ!" ತಂಬಾ ಭಿತೆರ್ ರಾವೊನ್ ಹಿಂ ಉತ್ರಾಂ ಆಯ್ಕೊನ್ ಆಸಲ್ಲಿ ಸಾರಾ ಎಕಾಥ್ಟಾಣೆ ಹಾಸ್ಲಿ ಹ್ಯಾ ಉತರ್ ಪ್ರಾಯೆರ್ ಭುರ್ಗೆಂ ಜಾಂವ್ಚೆಂ ಆಸಾಧ್ಯ್ ಮ್ಹಣ್ ತಿಣೆಂ ಲೆಕಲ್ಲೆಂ. ಸಾರಾನ್ ಹಾಸಲ್ಲೆಂ ಸರ್ವೆಸ್ಪರ್ ದೆವಾನ್ ಆಯ್ಕಾಲೆಂ, ತವಳ್ ಸರ್ವೆಸ್ಪರ್ ದೇವಾನ್ ಆಬ್ರಾಹಾಮಾಕ್ ಮ್ಹಳೆಂ "ಸಾರಾ ಕಿತ್ಯಾಕ್ ಹಾಸ್ಲಿ ದೇವಾಕ್ ಆಸಾಧ್ಯ್ ವ್ಹಳೆಂ ಖಂಚೆಂಯ್ ನಾ. ಘುಡ್ಲ್ಯಾ ವರ್ಸಾ ಠರಯಿಲ್ಲ್ಯಾ ವೆಳಾರ್ ತಾಕಾ ಎಕ್‌ಚೆರ್ಕೊ ಆಸ್ತಲೊ". ಥೊಡ್ಯಾ ವೆಳಾ ಉಪ್ರಾಂತ್ ತೆ ತೆಗೀಯ್ ಭಾಯ್ರ್ ಸರ್ನ್ ಸೊದೊಮಾಚಿ ವಾಟ್ ಧರ್ನ್ ಗೆಲೆ, ಆಬ್ರಾಹಾಮಾನ್ ತಾಂಕಾಂ ವಾಟ್ ದಾಕಯ್ಲಿ.

## ಸೊದೊಮ್ ಆನಿಂ ಗೊಮೆರ್ರಾ.

ಸರ್ವೆಸ್ಪರ್ ದೇವಾಸಂಗಿಂ ಆಬ್ರಹಾಮಾಗೇರ್ ಪಾವಲ್ಲೆ ದೋನ್ ದೂತ್ ಸೊದೊಮಾಚೆ ವಾಟ್ ಧರ್ನ್ ಗೆಲೆ. ಸರ್ವೆಸ್ಪರ್ ದೇವ್ ಆಬ್ರಾಹಾಮಾಲಾಗಿಂ ಸೊದೊಮಾಚ್ಯಾ ಖೊಟೆಪಣಾ ನಿಮ್ತಿ ಹೊ ಗಾಂವ್ ನಾಸ್ ಕರ್ತಲೊಂ ಮ್ಹಣ್ ಸಾಂಗ್ತಾನಾ ಆಬ್ರಾಹಾಮ್ ಸರ್ವೆಸ್ಪರ್ ದೇವಾಲಾಗಿಂ ತೆಂ ಆಡಾಂವ್ಕ್ ಚವ್ಕಾಶಿ ಕೆಲಿ. ತೆ ದೋಗ್ ದೂತ್ ಸೊದೊಮಾಂತ್ಲ್ಯಾ ಲೋತಾಚ್ಯಾ ಘರಾ ಪಾವ್ಲೆ. ಆನಿಂ ಲೋತಾಲಾಗಿಂ ಮ್ಹಣಾಲಾಗ್ಲೆ "ಹ್ಯಾ ಗಾಂವ್ಚ್ಯೊ ಲೋಕ್ ಅಣ್ವೊ ಜಾಲ್ಲ್ಯಾನ್ ಸರ್ವೆಸ್ಪರ್ ದೇವ್ ಸಗ್ಳೆಂ ಸೊದೊಮ್ ಶಹರ್ ನಾಸ್ ಕರ್ಚ್ಯಾರ್ ಆಸಾ ತ್ಯಾ ದೆಕುನ್ ತುಂ ತುಜ್ಯೆ ಬಾಯ್ಲೆ ಬರಾಬರ್ ತುಜ್ಯಾ ಧುವಾಂಕ್ ಘೆವ್ನ್ ಹೊ ಗಾಂವ್ ಸೊಡ್ನ್ ದೊಂಗ್ರಾರ್ ಪಳ್ನ್ ವಚ್ ಖಂಯ್ ಮಯ್ದಾನಾರ್ ರಾವಾನಾಕಾ, ಆನಿಂ ತುಮ್ಚ್ಯೆ ಮದೆಂ ಕೊಣೇಂಯ್ ಕಿತೆಂ ಘಡ್ತಾ ತೆಂ ಪಾಟಿಂ ಪರ್ತುನ್ ಪಳೆಂವ್ಕ್ ನಜೊ" ಮ್ಹಳ್ಯಾ ತಾಕಿತೆ ಬರಾಬರ್ ಜಬರ್‌ದಸ್ತಿ ಕರುನ್ ಲೋತಾಚ್ಯಾ ಕುಟ್ಮಾಕ್ ಶಹರಾ ಭಾಯ್ರ್ ಒಡಿಲಾಗ್ಲೆ.

ಅಶೆಂ ಲೋತಾಚ್ಯಾ ಕುಟ್ಮಾನ್ ಪಳಾಪಳ್ ಘೆತಾನಾ ಸರ್ವೆಸ್ಪರ್ ದೇವಾನ್ ಉಜ್ಯಾಚೊ ಪಾವ್ಸ್ ಒತುನ್ ಸೊದೊಮ್ ಆನಿಂ ಗೊಮೆರ್ರಾ ಶಹರಾಂ ನಾಸ್ ಕೆಲಿಂ. ಪಳಾಪಳಿಚ್ಯಾ ವೆಳಿಂ ಲೋತಾಚ್ಯಾ ಬಾಯ್ಲೆನ್ ಪಾಟಿಂ ಪರ್ತುನ್ ಪಳೆಲೆಂ ಆನಿಂ ತಿಮಿಟಾಖಾಂಬೊ ಜಾಲಿ. ಲೋತ್ ಆನಿಂ ತಾಚ್ಯೊ ದೋಗೀ ಧುವೊ ಸರ್ವೆಸ್ಪರ್ ದೇವಾಚ್ಯಾ ದಯೆನ್ ಶಾಬಿತಾಯೆನ್ ವಾಂಚೊನ್ ಉರ್ಲಿಂ. ಉಪ್ರಾಂತ್ ಲೋತಾಚ್ಯಾ ಧುವಾಂ ದ್ವಾರಿಂ ಬಾಪಯ್ ಸಂಗಿಂ ಮೋವಾಬ್ ಆನಿಂ ಆಮ್ಮೋನಿ ಮ್ಹಳೆಂ ಜನಾಂಗ್ ಉಬ್ಜಾಲೆಂ.

## ಇಜಾಕ್ ಆನಿಂ ಇಶ್ಮಾಯೇಲ್.

ಸರ್ವೆಸ್ಪರ್ ದೇವಾನ್ ಭಾಸಯಿಲ್ಲ್ಯಾ ಪರ್ಮಾಣೆ ಆಬ್ರಾಹಾಮಾಚೆ ಬಾಯ್ಲ್ ಸಾರಾಕ್ ಎಕ್ ಚೆರ್ಕೊ ಜಾಲೊ. ಆಬ್ರಹಾಮಾನ್ ತ್ಯಾ ಭುರ್ಗ್ಯಾಕ್ "ಇಜಾಕ್" ಮ್ಹಣ್ ನಾಂವ್ ದವರ್ಲೆಂ. ಹ್ಯಾ ವಕ್ತಾ ಅಬ್ರಾಹಾಮಾಕ್ ಸುಮಾರ್ ಶೆಂಬರ್ ವರ್ಸಾಂ ಪ್ರಾಯ್ ಭರಲ್ಲಿ. ತವಳ್ ಸಾರಾ ಮ್ಹಣಾಲಿ ಹ್ಯಾ ಪ್ರಾಯೆರ್ ಆಮ್ಕಾಂ ಭುರ್ಗೆಂ ದೀವ್ನ್ ಮ್ಹಜ್ಯಾ ತೊಂಡಾರ್ ಪರತ್ ಹಾಸೊ ಹಾಡ್ಲ್ಯೊ, ಹಿ ಖಬರ್ ಆಯ್ಕಾಲ್ಲಿಂ ಸರ್ವಾಂ ಮ್ಹಜೆ ಸಾಂಗಾತಾ ಹಾಸ್ತಲಿಂ... ಅಶೆಂ ಹ್ಯಾ ಕುಟ್ಮಾನ್ ಭಾರಿ ಸಂತೊಸಾನ್ ವ್ಹಡ್ಲೆಂ ಜೆವಾಣ್ ದವ್ರುನ್ ಫೆಸ್ತ್ ಕಶೆಂ ಆಚಾರ್ಲೆಂ.

ಎದೊಳಚ್ಚ್ ಅಬ್ರಾಹಾಮಾಕ್ ದೋಗ್ ಚೆರ್ಕೆ ಭುರ್ಗೆ ಆಸಲ್ಲೆ ಎಕ್ ಅಪ್ಲ್ಯಾ ಸ್ವ ಪತಿಣೆಂ ಥಾವ್ನ್ ಜಲ್ಮಾಲ್ಲೊ ಆನಿಂ ಸರ್ವೆಸ್ಪರ್ ದೇವಾನ್ ಭಾಸಯಿಲ್ಲೊ ಇಜಾಕ್, ಆನಿಂ ದುಸ್ರೊ ಕಾಮಾಚಿ ಬಾಯ್ಲ್ ಎಜಿಪ್ತ್ಯಾಗ್ರ್ ಹಾಗರಾ ಥಾವ್ನ್ ಜಲ್ಮಾಲ್ಲೊ ಇಶ್ಮಾಯೇಲ್.

ಇಜಾಕಾಕ್ ಇಶ್ಮಾಯೇಲ್ ಮೋಗ್ ಕರಿನಾತಲ್ಲೊ ತಸೆಂಚ್ಚ್ ತಾತ್ಸಾರ್ ನದ್ರೆಂತ್ ಪಳೆತಾಲೊ ಹೆಂ ಸರ್ವ್ ಸಾರಾಚ್ಯಾ ಗಮನಾಕ್ ಗೆಲೆಂ... ಆನಿಂ ತಿಕಾ ದುಕ್ಲೆಂ ಅಶೆಂ ರಾಗಾರ್ ಜಾಲ್ಲಿ ಸಾರಾ ಆಪ್ಲ್ಯಾ ಪತಿ ಅಬ್ರಹಾಮಾಕಡೆಂ ಒಚುನ್ "ಹ್ಯಾ ಗುಲಾಮ್ ಬಾಯ್ಲೆಕ್ ಆನಿಂ ತಾಚ್ಯಾ ಪೂತಾಕ್ ಭಾಯ್ರ್ ಘಾಲ್ ಜೆಂ ಕಿತೆಂ ದಾಯ್ಜಾಚೆಂ ಹಕ್ಕ್ ಇಜಾಕಾಕ್ ಆಸಾ ತೆಂ ಇಶ್ಮಾಯೇಲಾಕ್ ವೆಚೆಂ ನ್ಹಂಯ್!" ಮ್ಹಣಾಲಿ.

ಹೆಂ ಆಯ್ಕಾಲ್ಲೊ ಆಬ್ರಾಹಾವ್ ಬೆಜಾರ್ ಪಾವ್ಲೊ, ತರೀಪುಣ್ ಸರ್ವೆಸ್ಪರ್ ದೇವಾಚ್ಯಾ ಉತ್ರಾ ಪರ್ಮಾಣೆ ದುಸ್ರ್ಯಾಚ್ಚ್ ದಿಸಾ ಆಬ್ರಾಹಾಮಾನ್ ಹಾಗರಾಕ್ ಆನಿಂ ಇಶ್ಮಾಯೇಲಾಕ್ ಭಾಯ್ರ್ ಧಾಡ್ಲೊ.

(ಇಜಾಕ್ =ಹಾಸೊ ವ ಸಂತೊಸ್, ಇಶ್ಮಾಯೇಲ್=ದೇವಾನ್ ಆಯ್ಕಾಲ್ಲೊ).

ಮುಂದುವರಿಯುವದು.....

**ಬರಯ್ಣಾರ್: ಜೆಸುದಾಸ್**
**(ಡೇವಿಡ್ ಲುವಿಸ್ ತಲ್ಲುರ್).**

ಯೆಹೋವನು ತನ್ನ ಜನರಿಗೆ ವಿಮೋಚನೆಯನ್ನುಂಟುಮಾಡಿದ್ದಾನೆ (ಕೀರ್ತ. 11:9).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 9945710676, 9242649814**

## ಓದುಗರಿಗೆ ವಿಶೇಷ ಸೂಚನೆ :

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

## ಪ್ರಿಯ ವಾಚಕರ ಗಮನಕ್ಕೆ...

"ದೇವರ ಸ್ವರ" ಮಾಸ ಪತ್ರಿಕೆಯು ಅಂದರೆ ಮೇ 2012ನೇ ಸಂಚಿಕೆಯು ಈಗಾಗಲೇ ನಿಮ್ಮ ಕೈ ಸೇರಿದೆ. ಅದಕ್ಕಾಗಿ ದೇವರಿಗೆ ಸ್ತೋತ್ರ. ನಿಮ್ಮ ಪ್ರಾರ್ಥನೆಯಲ್ಲಿ ಈ ಪತ್ರಿಕೆಗಾಗಿಯೂ ಹಾಗೂ ಇದರ ಮೂಲಕ ನಿಮ್ಮಂತಹ ಸಾವಿರಾರು ಜನರು ಆಶೀರ್ವದಿಸಲ್ಪಡಲು ಪ್ರಾರ್ಥಿಸಿ ಮತ್ತು ಇತರರಿಗೆ ಇದನ್ನು ಪರಿಚಯಿಸಿರಿ. ವಾರ್ಷಿಕ ಚಂದಾ ರೂಪಾಯಿ 120/- ವರ್ಷಕ್ಕೆ.

ಸಂಪಾದಕರು

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115
ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ವಿಶ್ವಾಸದ ಮನೆ, ಬೇತೇಲ್ ಚರ್ಚ್, ಯೇಸುಪುರ,
ಶಂಕರಪುರ ಅಂಚೆ, ಉಡುಪಿ – 574115,
ಕರ್ನಾಟಕ, ಭಾರತ. Ph: (0820) 2589070, 2002781
E-mial: dgmofficial@gmail.com

# ಸ್ಥಳೀಯ ಮತ್ತು ವಿದೇಶ ಸುದ್ದಿ

- 80ರ ವೃದ್ಧೆಯಿಂದ ಯಶಸ್ವೀ ವಿಮಾನ ಭೂಸ್ಪರ್ಶ 80ರ ಹರೆಯದ ವೃದ್ದೆಯೋರ್ವರು ಎರಡು ಇಂಜಿಗಳ ವಿಮಾನವನ್ನು ಯಶಸ್ವಿಯಾಗಿ ಭೂಸ್ಪರ್ಶಗೊಳಿಸಿದ ಘಟನೆ ಉತ್ತರ ಪೂರ್ವ ವಿಸ್ಕಾನ್ ಸಿನ್ ನಗರದಲ್ಲಿ ನಡೆದಿದೆ. ವಿಮಾನ ಚಲಾಯಿಸುತ್ತಿದ್ದ ವೃದ್ದೆಯ ಪತಿ ಪ್ರಜ್ಞಾಶೂನ್ಯರಾದ ಹಿನ್ನಲೆಯಲ್ಲಿ ಆಕೆ ಈ ಅಮೋಘ ಸಾಹಸಕ್ಕೆ ಮುಂದಾದರು.
- ನ್ಯೂಯಾರ್ಕ್ ಮೇಲೆ ಮತ್ತೆ ಅಲ್ ಕಾಯಿದಾ ದಾಳಿ ನಡೆಸಲಿದೆಯೇ? ಇಂಥ ಸಾಧ್ಯತೆಯನ್ನು ಸಂಕೇತಿಸುವ ನಿಗೂಢ ಚಿತ್ರ ಸಂದೇಶವೊಂದು ಈಗ ಅಮೇರಿಕ ಅಧಿಕಾರಿಗಳ ನಿದ್ದೆಗೆಡಿಸಿದೆ. ಕೆಲವು ಅರೆಬಿಕ್ ವೆಬ್‌ಸೈಟ್‌ಗಳಲ್ಲಿ ಕಾಣಿಸಿಕೊಂಡಿರುವ ಈ ಗ್ರಾಫಿಕ್ ಚಿತ್ರದ ಬಗ್ಗೆ ನ್ಯೂಯಾರ್ಕ್ ಪೋಲಿಸರು ಮತ್ತು ರಾಷ್ಟ್ರೀಯ ಭದ್ರತಾ ಸಂಸ್ಥೆಗಳ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ.
- ಅಂಚೆ ಇಲಾಖೆಯಲ್ಲಿನ ಉಳಿತಾಯ ಯೋಜನೆಗಳನ್ನು ಮತ್ತಷ್ಟು ಆಕರ್ಷಕಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ವಿವಿಧ ಯೋಜನೆಗಳ ಮೇಲಿನ ಬಡ್ಡಿ ದರವನ್ನು ಶೇ. 0.5ರ ವರೆಗೆ ಏರಿಕೆ ಮಾಡಿ ಆದೇಶ ಹೊರಡಿಸಿದೆ.
- ಬಿಹಾರದಲ್ಲಿ ಇನ್ನು ಮುಂದೆ 'ಮನೆ ಬಾಗಿಲಿಗೇ' ಪಡಿತರ! ಈ ವ್ಯವಸ್ಥೆ ಜಾರಿಗೆ ಬಂದರೆ ಇಂಥ ಸಾಲಲ್ಲಿ ಮೊದಲ ರಾಜ್ಯವಾಗಲಿದೆ ಬಿಹಾರ ಆಡಳಿತದಲ್ಲಿ ಸಮಗ್ರ ಸುಧಾರಣೇ ಮತ್ತು ಭ್ರಷ್ಟಾಚಾರ ರಹಿತ ವ್ಯವಸ್ಥೆ ಜಾರಿಗೆ ತರುವ ಮೂಲಕ ವಿಶ್ವದ ಗಮನವನ್ನು ತನ್ನತ್ತ ಸೆಳೆದಿರುವ ಬಿಹಾರದ ನಿತೀಶ್‌ಕುಮಾರ್ ನೇತೃತ್ವದ ಸರ್ಕಾರ ಇದೀಗ ಪಡಿತರ ವಿತರಣೆ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಮುಂದಾಗಿದೆ.
- ಮೋದಿ ವಿಶ್ವದ ಅತ್ಯಂತ ಪ್ರಭಾವಿ ವ್ಯಕ್ತಿ ಕೆಲವೇ ವರ್ಷಗಳ ಹಿಂದೆ ಅಮೇರಿಕದಿಂದ ವೀಸಾ ನಿರಾಕರಿಸಲ್ಪಟ್ಟಿದ್ದ ಗುಜರಾತ್‌ನ ಮುಖ್ಯಮಂತ್ರಿ ನರೇಂದ್ರ ಮೋದಿ ವಿಶ್ವದ ಅತ್ಯಂತ ಪ್ರಭಾವಿ ವ್ಯಕ್ತಿಯೇ? ಅಮೆರಿಕದ 'ಟೈಮ್' ಮ್ಯಾಗಜೀನ್ ನಡೆಸುತ್ತಿರುವ ಜಾಗತಿಕ ಸಮೀಕ್ಷೆಯ ಪ್ರಕಾರ ಹಾಲಿ ನರೇಂದ್ರ ಮೋದಿ ನಂ. 1 ಸ್ಥಾನದಲ್ಲಿದ್ದಾರೆ.
- ಕತಾರ್ ವಿಶ್ವದ ಶ್ರೀಮಂತ ರಾಷ್ಟ್ರ: ಅಮೆರಿಕದ ನಿಯತಕಾಲಿಕೆ ಫೋಬ್ಸ್ ಇತ್ತೀಚೆಗೆ ಬಿಡುಗಡೆ ಮಾಡುವ ವಿಶ್ವದ ಸಂಪದ್ಭರಿತ ರಾಷ್ಟ್ರಗಳ ಪಟ್ಟಿಯಲ್ಲಿ ಕತಾರ್ ಅಗ್ರಸ್ಥಾನ ಪಡೆದಿದೆ. ತಲಾ ಆದಾಯದಲ್ಲಿ ಮುಂದಿರುವ 17 ಲಕ್ಷ ಜನಸಂಖ್ಯೆಯ ಈ ಅರಬ್ ಒಕ್ಕೂಟದ ರಾಷ್ಟ್ರ ಕತಾರ್ ಶ್ರೀಮಂತ ರಾಷ್ಟ್ರಗಳ ಪಟ್ಟಿಯಲ್ಲಿ ಮುಂದಿದೆ. ಇದೇ ಪಟ್ಟಿಯಲ್ಲಿ ಕುವೈತ್ 17ನೇ ಸ್ಥಾನದಲ್ಲಿದೆ.
- ಸಚಿನ್ ತೆಂಡೂಲ್ಕರ್‌ರವರು ವರ್ಷದ ಟೆಸ್ಟ್ ಇನ್ನಿಂಗ್ಸ್‌ಗೆ ಇ.ಎಸ್.ಪಿ.ಎನ್ ಕ್ರಿಕ್ ಇನ್ಫೋ ಪ್ರಶಸ್ತಿ ಪಡೆದಿದ್ದಾರೆ. 2011ರ ಸಾಲಿನ ಟೆಸ್ಟ್ ಕ್ರಿಕೆಟ್‌ನಲ್ಲಿ ಶ್ರೇಷ್ಠ ಇನ್ನಿಂಗ್ಸ್‌ಗಾಗಿ ದಕ್ಷಿಣ ಆಫ್ರಿಕಾ ವಿರುದ್ಧ ಕೇಪ್ ಟೌನ್‌ನಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ಗಳಿಸಿದ 146 ರನ್‌ಗಳು ಅವರಿಗೆ ಈ ಪ್ರಶಸ್ತಿ ತಂದುಕೊಟ್ಟಿದೆ.

---

## ಕಳೆದ ಮಾರ್ಚ್ ತಿಂಗಳ ಮಕ್ಕಳ ಸ್ವರ ಸಂಚಿಕೆ ಸರಿಯಾದ ಉತ್ತರಗಳು

1. ಮೂರನೇ ಪುಸ್ತಕವಾಗಿದೆ.
2. ಮಕ್ಕಳಿರಲಿಲ್ಲ.
3. ಯಾಜಕನಾಗಿದ್ದನು.
4. ಮೂಕನಾಗಿದ್ದನು.
5. ನಜರೇತ್.
6. ಪರಾತ್ಪರನ ಕುಮಾರನೆನೆಸಿಕೊಳ್ಳುವನು.
7. ದಾವೀದನ ಮನೆತನದವನಾಗಿದ್ದನು.
8. ಕುರುಬರಿಗೆ ಕಾಣಿಸಿಕೊಂಡನು.
9. ಸಿಮೆಯೋನನು.
10. ಪ್ರವಾದಿನಿ.
11. ನೀರಿನ ಸ್ನಾನಮಾಡಿಸುವವನಾಗಿದ್ದನು.
12. ಪವಿತ್ರಾತ್ಮನು.
13. ನಲವತ್ತು.
14. ದೆವ್ವ.
15. ಬಲೆಗಳನ್ನು ತೊಳೆಯುತ್ತಿದ್ದರು.
16. ಪೇತ್ರನೆಂಬ ಸೀಮೋನ.
17. ಮನೆಯ ಹೆಂಚು ತೆಗೆದು ಮೇಲಿನಿಂದ ಇಳಿಸಿದರು.
18. ಸುಂಕದವನು.

**ಮಾರ್ಚ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಸರಿ ಉತ್ತರ ಕಳುಹಿಸಿದವರು:**

**ಹರ್ಷಿತ ಶೈನ್ ಯೋಗಿನಿ ಬೇತೆಲ್ ಚರ್ಚ, ಉಡುಪಿ ಸರಸ್ವತಿ ಬೇತೆಲ್ ಚರ್ಚ್, ಉಡುಪಿ.**

ನನ್ನನ್ನು ಆಶ್ರಯಿಸುವವನೋ ದೇಶವನ್ನನುಭವಿಸಿ ನನ್ನ ಪರಿಶುದ್ಧಪರ್ವತವನ್ನು ಬಾಧ್ಯವಾಗಿ ಹೊಂದುವನು
(ಯೆಶಾ. 57:13).

# ಬೈಬಲ್ ಕ್ವೀಜ್ ಪ್ರಶ್ನೆಗಳ ಉತ್ತರಗಳು

1. ಮೋಶೆ (ಅರಣ್ಯ. 12:7).
2. ಅಬ್ರಹಾಮನು (ಯಾಕೋ. 2:23).
3. 2ನೇ ಯೋಹಾನ ಪತ್ರಿಕೆ.
4. ನೀಚನು (ಜ್ಞಾನೋ. 30:22).
5. "ಹವ್ವ" (ಆದಿ. 3:20).
6. 50 ವರ್ಷಕ್ಕೊಮ್ಮೆ ಆಚರಿಸುವ ಹಬ್ಬ (ಯಾಜ. 25:10).
7. ದಾವೀದನ ಕುರಿತು (ಅ.ಕೃ. 13:22).
8. 13 ವರ್ಷಗಳಲ್ಲಿ.
9. ಜೆರುಬ್ಬಾಬೆಲನ ಕುರಿತು (ಹಗ್ಗಾ. 2:23).
10. ಯೇಸುವಿನ ಪಾದ ಅಥವಾ ಯೇಸುವಿನ ವಾಕ್ಯೋಪದೇಶ (ಲೂಕ. 11:42).
11. ನತಾನಿಯೇಲನನ್ನು ಕುರಿತು (ಯೋಹಾ. 1:47).
12. ಮೊಟ್ಟೆಯೊಳಗಿನ ಲೋಳೆ (ಯೋಬ. 6:6).
13. ಫರಿಸಾಯರು (ಮತ್ತಾ. 15:12–14).
14. ಅಹೀಯನು (1 ಅರಸು. 11:30).
15. ರೆಬೆಕ್ಕಳು (ಆದಿ. 24:60).
16. ನಾಶನಮಾರ್ಗದಲ್ಲಿರುವವರಿಗೆ (2 ಕೊರಿಂಥ. 4:3).
17. ಯೆಹೋಶುವನು (ಯೆಹೋ. 8:30).
18. ಗಿಲ್ಬೋವ ಬೆಟ್ಟದಲ್ಲಿ (1 ಸಮು. 31:1–8).
19. ಯೆರುಬ್ಬಾಳ (ನ್ಯಾಯ. 7:1).
20. ಗೇರ್ಷೋನ್, ಕೆಹಾತ್, ಮೆರಾರೀಯ (ವಿಮೋ. 4:16, ಆದಿ. 46:11–22).

---

## ನಗೆಹನಿ

**ಯಾಕೆ ಸಣ್ಣ ಆಗಿಲ್ಲ?**

ಒಬ್ಬಳು : ನಿಮ್ಮ ಯಜಮಾನರು ದಿನಾ ಲಾಲ್‌ಬಾಗಿನಲ್ಲಿ ವಾಕಿಂಗ್ ಮಾಡ್ತಾರೆ. ಆದ್ರೂ ಸಣ್ಣ ಆಗಿಲ್ಲ. ಯಾಕೆ?

ಇನ್ನೊಬ್ಬಳು : ಬರ್‍ತಾ ಎಂ.ಟಿ.ಆರ್.ನಲ್ಲಿ ಹೊಟ್ಟೆಬಿರಿಯ ತಿಂದು ತಿಂತಾರೆ, ಅದಕ್ಕೆ.

---

## ಭಕ್ತರ ಹೇಳಿಕೆಗಳು

- ಬಿಲ್ಲಿಗ್ರಾಹ್ಯಾಮ್ ಪ್ರಪಂಚದ ಯಾವದೋ ಭಾಗದಿಂದ ಬಿಲ್ಲಿಗ್ರಾಹ್ಯಾಮ್ ಎಂಬ ದೇವಸೇವಕರು ಸಾವಿರಾರು ಜನರಿಗೆ ಸುವಾರ್ತೆಯನ್ನು ಸಾರುತ್ತಿದ್ದಾಗ್ಯೂ, ನಿಮ್ಮ ಪ್ರಾರ್ಥನೆಯ ಮೂಲಕ ನೀವು ಅವರ ಸಮೀಪದಲ್ಲಿದ್ದು ಅವರನ್ನು ಬಲಪಡಿಸಿ ಆಶೀರ್ವದಿಸಿ ಹುರಿದುಂಬಿಸಬಹುದು. ಅದೇ ರೀತಿ ಮಹಿಮೆಯಾದ ಸುವಾರ್ತೆಯನ್ನು ಹಾಡಿನ ಮೂಲಕ ತಿಳಿಸುವವರನ್ನು ಸಹ ನೀವು ಆದರಿಸಬಹುದು.
- ಹದಿನೈದನೇ ಶತಮಾನದಲ್ಲಿ ಇಟಲಿ ದೇಶಕ್ಕೆ ಸೇರಿದ ಸವನ್‌ರೋಲಾ ಎಂಬವರು ಆ ದಿನಗಳ ಉಜ್ಜೀವನಕ್ಕಾಗಿ ಪ್ರಾರ್ಥಿಸಿದ್ದನ್ನು ನೆನಸಿ ಕರ್ತನನ್ನು ಸ್ತುತಿಸುತ್ತೇನೆ.
- ಸ್ಟೋನ್ ಜಾಕಸನ್ ಎಂಬುವರು ಈ ರೀತಿ ಹೇಳುತ್ತಾರೆ, ಒಂದು ತಂಬಿಗೆ ನೀರನ್ನು ಕುಡಿದರೂ, ದೇವ ಆಶೀರ್ವಾದವನ್ನು ಕೇಳದೆ ಕುಡಿಯುವದಿಲ್ಲ ಎಂದು ತೀರ್ಮಾನಿಸಿದೆನು. ಒಂದು ಪತ್ರವನ್ನು ಬರೆದು ಮುಗಿಸಿದರೂ ಪ್ರಾರ್ಥನೆಯೊಂದಿಗೆ ಅದನ್ನು ಮುಚ್ಚುತ್ತೇನೆ. ಒಂದು ಪತ್ರವನ್ನು ತೆರೆದರೂ ಮೊದಲು ಕರ್ತನನ್ನು ಸ್ಮರಿಸಿ ಅದನ್ನು ತೆರೆಯುತ್ತೇನೆ. ತರಗತಿಗೆ ಹೋಗುವಾಗಲೂ, ಆ ತರಗತಿಯನ್ನು ಬಿಟ್ಟು ಹೋಗುವ ವಿದ್ಯಾರ್ಥಿಗಳಿಗಾಗಿಯೂ, ನನ್ನ ಬಳಿ ಬರುವ ವಿದ್ಯಾರ್ಥಿಗಳಿಗಾಗಿಯೂ ಪ್ರಾರ್ಥಿಸದೆ ನಾನು ಮುಂದುವರೆಯುವದಿಲ್ಲ" ಎಂದು ಹೇಳುತ್ತಾರೆ.

# THE WORD SHALL SET YOU FREE

In the beginning was the word, and the word was with God and the word was God. He was with God in the beginning. John 1:1The word became flesh and made his dwelling among us.This word of God manifested himself as Jesus.God says I am watching to see that my word is fulfilled. Jeremiah 1 -12

We see that there are two types of words.First one is the word of GODSecond one is the word of the world which belongs to Satan.What are the words which come out of our mouth? When we belong to the World, the words which come out our mouth they Hurt, maim, disables, discourage and destroy the lives of those around us.This is What Satan wants from us. We curse and shout and hurl abuses at others because we cannot forgive them.Satan doesn't want us to forget all the hurtful words we got from the people around us.

Satan doesn't want us to forgive.He wants to remind us of our past sins, our past hurts, so our present gets destroyed.

Do you know the word which comes out of your mouth has power.If the words which come out of you are negative it will destroy. the person against whom it is directed. If the word which comes out of your mouth belongs to God it will kindle hope, restore the fallen spirit, heal the broken heart, body and soul. The word has another character it will never go away. It has the ability to linger in the atmosphere.That is why certain people's houses are gloomy. You can feel the chill when you enter the premises. Recently I read a article which said that Scientists are able bring out the sounds which are stored in the stones! Looks Impossible? The word of god comes to my mind. If you keep quiet these stones will testify. How strange. What if these stones testify at the time of judgement of all the foul, cursing,destroying Words which came out of our mouth? How does these wordly word enter our minds? We feed them with all the Filth and lies of this world. Rememnber Satan is a lier.He comes to steal and destroy.He wants to steal your peace of mind.He wants steal your health.He wants to destroy peace and love of your family.

Do you want this to happen in your life? Another lie Satan tells all of us is that you are born like this and you cannot change. He tells us that since we are born in such a Zodiac sign these are your characters which are inbuilt and in you cannot change them. He says this is the will of God.This is a lie.One person came to me and he boasted that he is a born leader. and bold person because he is born in in such a zodiac sign.He also said he is a womanizer because of his zodiac sign.He said tried to change but couldnot. He is now in an adulterous relationship. His family life has suffered. His wife tried to get a divorce and his children hate him. He is still bound to this sinful life because of Satan's lie.Gods word has the power to change you, transform you, liberate You, It will heal your body and and mind, If only you will let it enter Your life.The choice is yours. Man has been given a choice to choose the lies of Satan or the truth which is the word of God.

Satan comes and tells us about Judas.He says Judas was preordained to hand over Jesus.So it is not his fault. True but has not God given him chance to repent like Peter?

Satan brings another lie.Why did God keep the tree of knowledge at Eden? Did he keep it to tempt man? He kept it to show man that he trusts him as his own child and that he has a free choice to choose between Good and Bad. Till Adam & Eve ate the forbidden fruit the there was no law be-

ನಾನು ಯೆಹೋವನಲ್ಲಿ ಪರಮಾನಂದಪಡುವೆನು, ನನ್ನ ಆತ್ಮವು ನನ್ನ ದೇವರಲ್ಲಿ ಹಿಗ್ಗುವದು
(ಯೆಶಾ. 61:10).

cause they did not know what is good or bad. What is just and what is sinful. But when the knowledge came there was a need for a law. With law came punishment for our sins. Sometimes it is true that we are bound by generational curses of our fathers and forefathers which runs in families.Satan again cheats us and says that these canot be removed. It's a lie All the generational curses can be removed by the word of God which is our Saviour Jesus Christ.

The same word of God now lives in us when we accept Jesus as our saviour.This same word will deliver us from all sins and bondages.What are we feeding our selves with with hog feed and all the filth of this world? Let us be careful of what we read what we see with whom we live. All the lustful books,all the horror movies we read , all the horoscopes we read bring the lies of Satan into our lives destroying us. Let us be careful before they leave their roots deep inside us. Once they live their deep roots within us it may be difficult for us to come out of it. I'd like to tell you a real story of a young man who got married recently. He was brought to my clinic because he was behaving strangely.Within Two days of his marriage he started suspecting his wife of infidelity. He tried to kill her with a knife.Strange isn't it.II talked to this gentleman and asked about his past. He revealed that before marriage he had illicit sexual relationship with a married lady. The devil had now entered him now and was telling him not to trust his wife because she too could cheat him like the other woman.And now comes the generational curse.He told me that he knew that his father too had adulterous relationship with another woman.Men and women Who have sexual relationship before marriage they run the risk of allowing Satan to deceive them. When they marry someone else, Satan starts comparing the virtues/weaknesses of their former companions with their Husbands or wives.Satan puts all lies in their hearts and does everything possible to destroy their marriage.That is why God has Forbidden fornication and adultery Don't you want this power which Jesus has promised. I have given you to power to trample down all the powers of the enemy. When the word of God lives in us it will not only deliver us but deliverence also come out of our mouth and delivers others.

Then Lord reached out his hand and touched my mouth and said To me, “now, I have put my words in your mouth. See today I Appoint you over the nations and kingdoms to uproot and tear Down, to destroy and overthrow, to build and to plant. (Jeremiah 1 :9-10).

Don't want this kind of power? Instead being destroyer, you will be Become a builder.You will be a blessing to all those around you.

Not by might, nor by power but by my spirit says the Lord. (Zechariah 4 :6).

Let us pray

Loving heavenly father, Holy be thy name.Let your name be glorified.

Let all the world praise you name.Let your tender mercies pour on us.

Let your spirit fill us with your heavenly blessings.Breaking and tearing down the defences satan has built in our life. Let there be a new beginning A Life filled with Your blessing, love and peace.Touch every soul that is seeking your Blessing today.Deliver them Lord from all the bondages of Satan. Now Lord.Now. Do it now Lord.Fulfill your promise.

I pray in the name of our Lord Jesus Christ.Amen.

**Dr.Donald Simons M. D.**

ಯೆಹೋವನು ಮೇಲಣ ಲೋಕದಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದ್ದಾನೆ; ಆತನು ಸಮಸ್ತವನ್ನೂ ಆಳುತ್ತಾನೆ (ಕೀರ್ತ. 103:19).

# ರೂತಳ ಪುಸ್ತಕ

ಕರ್ತನಾದ ಯೇಸುಕ್ರಿಸ್ತನ ಮಧುರ ನಾಮದಲ್ಲಿ ಈ ಪತ್ರಿಕೆಯನ್ನು ಓದುತ್ತಿರುವಂತಹ ಕ್ರಿಸ್ತನಲ್ಲಿ ಪ್ರಿಯ ಸಹೋದರ/ಸಹೋದರಿಯರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳು. ನಾನು ಮಹಿಳೆಯರ ಸ್ವರದಲ್ಲಿರುವ ಸಂತೋಷವುಳ್ಳ ಕುಟುಂಬ ಎಂಬ ನನ್ನ ಲೇಖನವನ್ನು ಮುಗಿಸಿದ ನಂತರ ಅನೇಕ ಸಹೋದರ/ಸಹೋದರಿಯರು ಫೋನ್ ಕರೆ ಮೂಲಕ ಹಾಗೂ ಪತ್ರಗಳ ಮೂಲಕವಾಗಿಯೂ ನೀವು ಸಂತೋಷವುಳ್ಳ ಕುಟುಂಬವನ್ನು ಮುಗಿಸಬಾರದಾಗಿತ್ತು ಅದರಿಂದ ನಮಗೂ ನಮ್ಮ ಕುಟುಂಬಕ್ಕೂ ಅನೇಕ ಆತ್ಮೀಕ ಪ್ರಯೋಜ ಹಾಗೂ ಆಶೀರ್ವಾದ ಉಂಟಾಗಿದೆ ಅದನ್ನೇ ಮುಂದುವರಿಸಿರಿ ಎಂಬುದಾಗಿಯೂ ಆಲೋಚನೆ ಹೇಳಿದರು. ತುಂಬಾ ಪ್ರಾರ್ಥನೆಯ ನಂತರ ದೇವರಾತ್ಮನು ನನಗೆ ರೂತಳ ಪುಸ್ತಕವನ್ನು ಬರೆಯಲು ಪ್ರೇರೇಪಿಸಿದನು. ಇದು ಕೂಡಾ ಪರಿಶುದ್ಧಾತ್ಮನ ಪ್ರೇರಣೆ ಹಾಗೂ ದೇವರ ಚಿತ್ತದ ಪ್ರಕಾರ ಬರೆಯುವುದರಿಂದ ಇದರಿಂದ ಅನೇಕರು ಆತ್ಮೀಕ ಪ್ರಯೋಜವನ್ನು ಪಡೆಯುವರು ಎಂದು ನಾನು ನಂಬುತ್ತೇನೆ. ನೀವೆಲ್ಲರೂ ನನಗೋಸ್ಕರ, ನನ್ನ ಕುಟುಂಬಕೋಸ್ಕರ ಹಾಗೂ ನಮ್ಮ ಸೇವೆಗೋಸ್ಕರ ಅನುದಿನವೂ ಪ್ರಾರ್ಥಿಸಿರಿ.

ಈ ಪುಸ್ತಕದಲ್ಲಿ 4 ಅಧ್ಯಾಯಗಳು, 85 ವಚನಗಳು ಇವೆ. ಸತ್ಯವೇದದಲ್ಲಿ ಇದು 8ನೆಯ ಪುಸ್ತಕವಾಗಿದೆ. ಹೊಸ ಒಡಂಬಡಿಕೆಯಲ್ಲಿ 2 ಕೊರಿಂಥ 8ನೆಯ ಪುಸ್ತಕವಾಗಿದೆ. ರೂತಳ ಪುಸ್ತಕಕ್ಕೂ 2 ಕೊರಿಂಥಕ್ಕೂ ಇರುವ ವ್ಯತ್ಯಾಸವನ್ನು ನಾವು ನೋಡೋಣ.

**ರೂತಳು**

1. ನಿರೀಕ್ಷೆ ಕಳಕೊಂಡವರಿಗೆ ನಿರೀಕ್ಷೆಯನ್ನುಂಟು ಮಾಡುವ ಪುಸ್ತಕವಾಗಿದೆ.
2. ನಂಬಿಕೆಯಲ್ಲಿ ಬಿದ್ದು ಹೋದವರಿಗೆ ಪುನರ್‌ಸ್ಥಾಪನೆಯನ್ನು ಉಂಟುಮಾಡುವ ಪುಸ್ತಕವಾಗಿದೆ.
3. ಪ್ರತಿಯೊಬ್ಬರ ಜೀವಿತದಲ್ಲೂ ಹೊಸ ಆರಂಭ ಇದೆ ಎಂದು ನಿರೂಪಿಸುವ ಪುಸ್ತಕವಾಗಿದೆ.
4. ವಿವಿಧ ಸಮಸ್ಯೆಗಳಲ್ಲಿ ಬಂಧಿಸಲ್ಪಟ್ಟವರಿಗೆ ಬಿಡುಗಡೆ ಇದೆ ಎಂದು ತಿಳಿಸುವ ಪುಸ್ತಕವಾಗಿದೆ.
5. ಯಾವುದೇ ಕಾರಣಕ್ಕೂ ಒಂದು ಸಲ ದೇವರ ಅನ್ಯೋನ್ಯತೆ ಕಳಕೊಂಡವರು ತಿರುಗಿ ಅನ್ಯೋನ್ಯತೆ ಹೊಂದಲು ಅವಕಾಶ ಇದೆ ಎಂದು ತಿಳಿಸುವ ಪುಸ್ತಕವಾಗಿದೆ.
6. ದೇವರ ಬಳಿ ತಿರುಗಿ ಬರುವುದಾದರೆ ಶೂನ್ಯ ಅವಸ್ಥೆಯಿಂದ ದೇವರು ಆಶೀರ್ವದಿಸಿ ಅನೇಕರಿಗೆ ಆಶೀರ್ವಾದ ಪಾತ್ರೆಯಾಗಿ ದೇವರು ಮಾರ್ಪಡಿಸ ಬಲ್ಲನು ಎಂದು ತಿಳಿಸುವ ಪುಸ್ತಕವಾಗಿದೆ.
7. ದೇವರ ಚಿತ್ತಕ್ಕನುಸಾರವಾಗಿ ಒಪ್ಪಿಸಿಕೊಟ್ಟರೆ ಕರ್ತನು ಸರಿಯಾದ ಮಾರ್ಗದರ್ಶನ ಮಾಡಿ ಆತನಿಗೆ ಒಪ್ಪುವ ಮಾರ್ಗದಲ್ಲಿ ನಡೆಸುವನು ಎಂದು ತಿಳಿಸುವ ಪುಸ್ತಕವಾಗಿದೆ.

**2 ಕೊರಿಂಥ:**

1. ದೇವರಾತ್ಮ ಸಂಬಂಧವಾದ ಸೇವೆಯ ಬಗ್ಗೆ ತಿಳಿಸುವ ಪುಸ್ತಕವಾಗಿದೆ.
2. ಹಳೆ ಒಡಂಬಡಿಕೆಯ ಸೇವೆ ಮರಣ ವಿಧಿಸುವ ಸೇವೆ, ಹೊಸ ಒಡಂಬಡಿಕೆಯ ಸೇವೆ ಪ್ರಭಾವವುಳ್ಳ ಸೇವೆ ಎಂದು ತಿಳಿಸುವ ಪುಸ್ತಕವಾಗಿದೆ.
3. ಹಳೆ ಒಡಂಬಡಿಕೆಯ ಸೇವೆಯು ಅಪರಾಧ ನಿರ್ಣಯಕ್ಕೆ ಸಾಧನವಾಗಿರುವ ಸೇವೆಯಾಗಿದೆ. ಹೊಸ ಒಡಂಬಡಿಕೆಯ ಸೇವೆಯು ನೀತಿಗೆ ಸಾಧನವಾಗಿರುವ ಸೇವೆಯಾಗಿದೆ ಎಂದು ತಿಳಿಸುವ ಪುಸ್ತಕವಾಗಿದೆ.
4. ಬಿಡುಗಡೆ ಮಾಡುವಂಥ ಸೇವೆಯಾಗಿದೆ ಎಂದು ತಿಳಿಸುವ ಪುಸ್ತಕವಾಗಿದೆ.
5. ಕರ್ತನಾದ ಯೇಸುಕ್ರಿಸ್ತನ ಸ್ವಾರೂಪ್ಯಕ್ಕೆ ನಡೆಸಲ್ಪಡುತ್ತೇವೆ ಎಂದು ತಿಳಿಸುವ ಪುಸ್ತಕವಾಗಿದೆ.
6. ಕ್ರಿಸ್ತನಲ್ಲಿ ಹೊಸ ಸೃಷ್ಟಿ ಎಂದು ತಿಳಿಸುವ ಪುಸ್ತಕವಾಗಿದೆ.
7. ಕ್ರಿಸ್ತನಲ್ಲಿ ಎಲ್ಲಾ ವಾಗ್ದಾನಗಳು ನೆರವೇರುತ್ತವೆ ಎಂದು ತಿಳಿಸುವ ಪುಸ್ತಕವಾಗಿದೆ.

ಪುಸ್ತಕದ ಬರಹಗಾರನು ಪ್ರವಾದಿಯಾದ ಸಮುವೇಲನಾಗಿದ್ದಾನೆ. ನ್ಯಾಯಸ್ಥಾಪಕರು ಇಸ್ರಾಯೇಲರನ್ನು ಆಳುವಂತಹ ಸಂದರ್ಭದಲ್ಲಿ ಈ ಪುಸ್ತಕದಲ್ಲಿರುವ ಚರಿತ್ರೆಯು ಜನ್ಮವೆತ್ತಿತು.

ಕರ್ತನು ಚೀಯೋನಿನಿಂದ ಹೇರಳವಾಗಿ ಆಶೀರ್ವಾದಿಸಲಿ.

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ**

ಉತ್ಸಾಹಧ್ವನಿಯೂ ಜಯಘೋಷವೂ ನೀತಿವಂತರ ಗುಡಾರಗಳಲ್ಲಿವೆ (ಕೀರ್ತ. 118:15).